A Circumnavigation to the world of Dance and Performing Arts : A complete Journal

RNI No :KARKAN/2009/29752

ಜ್ಯೇಷ್ಠ–ಆಷಾಢ 2011

ಸಂಚಿಕೆ : 3 ಸಂಪುಟ : 5

ಸಂಪಾದಕರು : ಮನೋರಮಾ ಬಿ.ಎನ್.
ಪ್ರಸರಣಾಧಿಕಾರಿ : ವಿಷ್ಣುಪ್ರಸಾದ್ ನಿಡ್ವಾಜೆ
ಕಛೇರಿ ನಿರ್ವಹಣೆ : ರಾಜ್‌ಗೋಪಾಲ್ ಬಿ.ಎನ್.
ಪ್ರಕಾಶನ : ಶ್ರೀ ಸಾನ್ನಿಧ್ಯ ಪ್ರಕಾಶನ (ರಿ.), ಮಡಿಕೇರಿ
ರಕ್ಷಾಪುಟ ವಿನ್ಯಾಸ : ಲಾವಣ್ಯ ಪ್ರಿಂಟರ್ಸ್, ಬೆಂಗಳೂರು

# ಗ್ರೀಷ್ಮ ಗಾಂಭೀರ್ಯ

## ಅಂತರಂಗ.....


- ಮಂಜೀರ.......................................................2
- ಹಸ್ತ ಮಯೂರಿ : ತಾಮ್ರಚೂಡ ಹಸ್ತ.......................................................4
- ಲಲಿತ ಲಹರಿ : ಅಷ್ಟನಾಯಿಕೆಯರ ಚಿತ್ತವೃತ್ತಿ: ಅಭಿಸಾರಿಕೆ..................................6
- ರಂಗ ಭ್ರಮರಿ: ನೃತ್ಯ ನಾಟಕಗಳಾಗಿ ಕನ್ನಡ ಕಾವ್ಯ ......................................11
  ದಲಿತರು ಮತ್ತು ನೃತ್ಯ : ಒಂದು ವಿಶ್ಲೇಷಣೆ..........................22
- ನಿಮ್ಮ ಬರೆಹ ನಮ್ಮ ಓದು /ಸಂಶೋಧನಾ ಸಂಗ್ರಹ ಸಮೀಕ್ಷೆ..........................17
- ದರ್ಪಣ : ನೃತ್ಯ ರಂಗದ ಅನಭಿಷಿಕ್ತ ರಾಣಿ : ರುಕ್ಮಿಣಿ....................................18
- ರಂಗಸ್ಥಳ : ಅರ್ಜುನ ಐರಾವತ ತಂದದ್ದೇನೂ ವಿಶೇಷ ಅಲ್ಲ ! ...................20


All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their ownnot of Noopura Bhramari.

Visit our website : **www.noopurabhramari.com**
for the latest news, views and other updates.

ನೂಪುರ ಭ್ರಮರಿಗೆ ಲೇಖನ–ವಿವರ–ವಿಚಾರ–ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು
ಪ್ರತೀ ಎರಡನೇ ತಿಂಗಳ 10ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.

## ಮಂಜೀರ

'ಯಾಕೆ ಬಾನಿ? ಯಾವುದು ಬಾನಿ? ಅವೆಲ್ಲಾ ಅವರವರ ಸೃಷ್ಟಿ ಅಲ್ಲವೇ? ಅದನ್ಯಾಕೆ ಇನ್ನೊಬ್ಬರ ಮೇಲೆ ಹೇರಬೇಕು? ಯಾಕೆ ತಮ್ಮದನ್ನೇ ಎಲ್ಲರೂ ಕಲಿಯಬೇಕು, ಪ್ರತಿಷ್ಠಾಪಿಸಿಕೊಳ್ಳಬೇಕು ಎಂಬ ಹಠ? ಎಲ್ಲಾ ಗುರುಗಳೂ ಸೇರಿ ಕಲಿಯುವ ವಿದ್ಯಾರ್ಥಿಗಳೆಲ್ಲರಿಗೂ ಅನ್ವಯವಾಗುವ ಹಾಗೆ ಒಂದೇ ಬಗೆಯ ಸಿಲೆಬಸ್ ಅಂತ ಯಾಕೆ ಮಾಡಿಕೊಳ್ಳಬಾರದು? ಎಲ್ಲರಿಗೂ ಅನ್ವಯವಾಗುವ ಹಾಗೆ ಒಂದು ಸಮಗ್ರ ಶಿಕ್ಷಣ ಬೇಕು. ಪಾಪ. ಕಲಿಯುವ ಮಕ್ಕಳಿಗೆ ಗುರುಗಳು ಬದಲಾದಂತೆಲ್ಲಾ ಅವರವರ ಶೈಲಿ ಕಲಿಯಲು ಹೋಗಬೇಕಾದ ಅನಿವಾರ್ಯತೆ. ಹೀಗೆ ಆಗಿ ಮಕ್ಕಳು ಕೊನೆಗೆ ನೃತ್ಯದ ಮೇಲೆ ಆಸಕ್ತಿಯನ್ನೇ ಕಳೆದುಕೊಳ್ತಾರೆ.' ಎಂದಿದ್ದರು ದಿ. ದಂಡಾಯುಧಪಾಣಿ ಪಿಳ್ಳೈ ಅವರ ಪಟ್ಟ ಶಿಷ್ಯೆ ಹಿರಿಯ ಕಲಾವಿದೆ ಜಯಲಕ್ಷ್ಮಿ ಆಳ್ವ. ಅವರ ದನಿಯಲ್ಲಿ ವೇದನೆಯಿತ್ತು; ಆಗ್ರಹವಿತ್ತು.

ಹೌದು. ಒಮ್ಮೆ ಸೂಕ್ಷ್ಮವಾಗಿ ಗಮನಿಸಿ ನೋಡಿದರೆ ಸಾಮಾನ್ಯರಿಂದ ಮೊದಲ್ಗೊಂಡು ನೃತ್ಯ ಅದರಲ್ಲೂ ಭರತನಾಟ್ಯವನ್ನು ಕಲಿಯುವ ಪ್ರತೀ ವಿದ್ಯಾರ್ಥಿಗೂ ಇದು ಅನುಭವಕ್ಕೆ ಬಂದಿರುತ್ತದೆ. ಉದಾ : ಅಡವು ಶೈಲಿಯಲ್ಲೇ ಸಾಕಷ್ಟು ವ್ಯತ್ಯಾಸಗಳು, ಅಲರಿಪ್ಪುವಿನಂತಹ ನೃತ್ಯಬಂಧಗಳಲ್ಲಿಯೇ ಸಾಕಷ್ಟು ಮಾರ್ಪಾಡುಗಳು. ಅದರಲ್ಲೂ ಬಹಳ ಸಲ ನಮ್ಮೆಲ್ಲರ ಅನುಭವಕ್ಕೆ ಬರುವಂತೆ ವಿದ್ಯಾರ್ಥಿಗಳು ಗುರುವನ್ನು ಕಾರಣಾಂತರಗಳಿಂದ ಬದಲಾಯಿಸಿ ಮತ್ತೊಬ್ಬರಲ್ಲಿ ವಿದ್ಯಾಭ್ಯಾಸ ಅರಸಿ ಹೊರಟರೆ ರಸಾಸ್ವಾದನೆಗೆ ಅನುಕೂಲವಾಗುವಂತಹ ದಾರಿಯಲ್ಲಿ ನಡೆಯಲು ಕಲಿಸುವುದಕ್ಕಿಂತ ಕುದುರೆ ಕಣ್ಣುಪಟ್ಟಿ ಕಟ್ಟಿ ತಮ್ಮ ಮುದ್ರೆಯನ್ನೊತ್ತಲು ಬಯಸುವವರೇ ಬಹಳ. ಇದು ನಗರ– ಪಟ್ಟಣ–ಗ್ರಾಮವೆನ್ನದೆ ಅದೆಲ್ಲವನ್ನೂ ಒಳಗೊಂಡ ವಿಶಾಲ ವ್ಯಾಪ್ತಿಯಲ್ಲಿ ಹರಡಿಕೊಂಡಿರುವುದಲ್ಲದೆ ಶಿಕ್ಷಣನೀತಿಗಳಲ್ಲೂ ವ್ಯಾಪಕವಾಗಿ ಕಂಡುಬರುತ್ತಲಿದೆ. ಫಲವಾಗಿ ಕಲೆಯೆಂಬುದು ಪ್ರಲೋಭನೆಗಳೊಳಗೆ ಮುಳುಗಿ ಅವರವರ ಹಕ್ಕುಸ್ಥಾಪನೆಯಲ್ಲೇ ಕರ್ತವ್ಯಗಳು ಕಸವಾಗಿ ಕಲಾಸ್ವಾದನೆ ಬೀದಿಗೆ ಬೀಳುತ್ತಲಿದೆ.

ಹಾಗೆ ನೋಡಿದರೆ ಇಂತವರ ಪೈಕಿ ಒಂದು ಗುಂಪು ತಮ್ಮದೇ ಆದ ಸ್ವತಂತ್ರ ಅಭಿವ್ಯಕ್ತಿಯನ್ನು ಕಂಡುಕೊಳ್ಳುವಲ್ಲಿ ಹಿಂದುಳಿದ, ಅಪ್ಪ ಹಾಕಿದ ಆಲದ ಮರಕ್ಕೆ ನೇಣು ಹಾಕಿಕೊಳ್ಳುತ್ತೇವೆ ಎನ್ನುವಂತವರಾದರೆ; ಮತ್ತೊಂದು ಗುಂಪು ತಮ್ಮದೇ ಆದ ಹೊಸ ಪರಂಪರೆಯನ್ನು ಬೆಳೆಸಿಕೊಳ್ಳುವ ಚಪಲದಲ್ಲಿ ಮತ್ತೊಬ್ಬರ ಗೋಣು ಮುರಿಯುವವರು. ಎಲ್ಲರಿಗೂ ಶಿಷ್ಯರ ತಪ್ಪನ್ನು ತಿದ್ದುವುದಕ್ಕಿಂತ ಹೆಚ್ಚಾಗಿ 'ತಪ್ಪಿರುವುದನ್ನು ಸರಿ ಮಾಡುತ್ತಿದ್ದೇವೆ' ಎಂದು ಬ್ಯಾನರ್ ಹಿಡಿಯುತ್ತಾ ತಂತಮ್ಮ ಬಾನಿ/ಶೈಲಿಯ ಮುದ್ರೆಯೊತ್ತುವ ಚಟ. ಇದರ ಫಲವಾಗಿ ಎಷ್ಟೋ ಮಂದಿ ನರ್ತನಾಪೇಕ್ಷಿ ವಿದ್ಯಾರ್ಥಿಗಳು ತಮ್ಮ ಗುರುಗಳ, ಶಿಕ್ಷಕರ ಪಡಿಯಚ್ಚಿನಂತೆ ತಯಾರಾಗುತ್ತಾರೆಯೇ ವಿನಾ ತಮ್ಮದೇ ಪ್ರಭಾವಳಿಯನ್ನು ರೂಪಿಸಿಕೊಳ್ಳುವಲ್ಲಿ ಸೋಲುತ್ತಾರೆ. ಅರ್ಥ, ಕಾರಣ, ಔಚಿತ್ಯ ತಿಳಿಯದೆ ಗೊಂದಲದ ಗೂಡುಗಳೊಳಗೆ ಸಿಲುಕುತ್ತಾರೆ. ಇದೊಂದು ಮಾದರಿಯಲ್ಲಿ ಆನೆಯನ್ನು ಸರಪಳಿ ಹಾಕಿ ಹಿಡಿದಿರಿಸಿ ಪಳಗಿಸಿದಂತೆ.

ಇಂತಹ ಪೂರ್ವಾಗ್ರಹ ಪೀಡಿತ ಗುರುಗಳೇ ಇಂದಿನ ನರ್ತನಕ್ಷೇತ್ರದಲ್ಲಿ ಬಹುಪಾಲು ಮಂದಿ ಎನ್ನುವುದೇ ದೊಡ್ಡ ವೇದನೆ ಮತ್ತು ಅಪಾಯವೂ ಕೂಡಾ. ಒಳ್ಳೆಯದು ಯಾವುದೇ ಆಗಿದ್ದರೂ ಅದನ್ನು ಅಳವಡಿಸಿಕೊಳ್ಳೋಣ ಎಂಬ ವೈಶಾಲ್ಯತೆಯಿಲ್ಲದ ; ಎಲ್ಲಿ ತಮ್ಮ ಪ್ರಕಾಶ ಮಂಕಾಗುವುದೋ ಎಂಬ ಆತಂಕದಲ್ಲಿ ಬೇರೊಬ್ಬರ ಅಭಿವ್ಯಕ್ತಿಯಲ್ಲಿ ಲೋಪ ಕಂಡುಹಿಡಿಯುವ ಸಣ್ಣ ಮನಸ್ಸು ತಮ್ಮ ಎಲೆಯಲ್ಲಿ ಆನೆ ಸತ್ತು ಬಿದ್ದರೂ ಬೇರೊಬ್ಬರ

ಎಲೆಯ ನೊಣ ಹುಡುಕುವ ವಿಚಿತ್ರ ಆನಂದ. ನಿಜವಾದ ಪ್ರತಿಭೆಯಿದ್ದರೆ ಅದಕ್ಕೆ ಪ್ರಕಾಶಿಸುವ ಶಕ್ತಿಯೂ ಇರುತ್ತದೆ ಎಂಬ ನಂಬುಗೆಯಿಲ್ಲದವರ ಬಳಿಯಲ್ಲಿ ಕಲಿಯಹೋಗುವುದು ಎಂದರೆ ಆಯ್ಕೆಯ ಪ್ರಶ್ನೆಯೇ ಇಲ್ಲದೆ ತಮ್ಮನ್ನು ತಾವೇ ಬಂಧನದಲ್ಲಿರಿಸಿಕೊಳ್ಳುವುದೆಂದೇ ಅರ್ಥ.

ಈ ಕಬಂಧ ಬಾಹು ಸಂಗೀತಕ್ಕಿಂತಲೂ ಹೆಚ್ಚಾಗಿ ನೃತ್ಯವನ್ನು ಆವರಿಸಿಕೊಂಡಿರುವುದು ಒಂದು ಅಚ್ಚರಿ. ಬಹುಷಃ ಸಂಗೀತದಲ್ಲಿ ನೃತ್ಯದಷ್ಟು ಘೋಷಿತ ಶೈಲಿಗಳು ಬಾರದಿರುವುದೇ ಕಾರಣವೇನೋ ! ಮತ್ತು ಸಂಗೀತ ಕಛೇರಿ ಮತ್ತು ಪರೀಕ್ಷೆಗಳಿಗೆ ನಿರೀಕ್ಷಿತ ಮಟ್ಟದ ಪ್ರತಿಭೆ ಇಲ್ಲದೇ ಹೋದರೆ ಎಂತಹ ಹಿನ್ನೆಲೆ, ಅನುಕೂಲಗಳಿದ್ದರೂ ಅದು ಬಹಳ ಸಮಯ ಪ್ರಯೋಜನಕ್ಕೆ ಬರಲಾರದು. ಆದರೆ ನೃತ್ಯದಲ್ಲಿ ಹಾಗಲ್ಲ; ಪ್ರತಿಭೆಗಿಂತಲೂ ಹೆಚ್ಚಾಗಿ ಮೊದಲೇ ಹಣ, ಪ್ರತಿಷ್ಠೆ, ಖರ್ಚು ಮಾಡುವ ಶಕ್ತಿ–ಆಡಂಬರಗಳಲ್ಲೇ ಮುಳುಗಿ ಹೋಗಿರುವ ನೃತ್ಯಕ್ಕೆ ಬಾನಿ/ಶೈಲಿಯೆಂಬುದು ಅಳತೆಗೋಲಾಗುತ್ತಿದೆ. ಪಂದನಲ್ಲೂರು, ಮೈಸೂರು, ವಳವೂರ್, ಕಲಾಕ್ಷೇತ್ರ,...ಮುಂತಾದವುಗಳಷ್ಟೇ ಅಲ್ಲದೆ ಪ್ರತೀ ಮುಖ್ಯ ಶೈಲಿಗಳೊಳಗೂ ಹಲವು ಶೈಲಿಗಳು, ಅದರಂತೆಯೇ ನಡೆಯಬೇಕೆನ್ನುವ ಹಠ ಕೇವಲ ನೃತ್ಯಪ್ರದರ್ಶನಗಳಲ್ಲಷ್ಟೇ ಅಲ್ಲದೆ; ಪ್ರಾಥಮಿಕ ಪಠ್ಯದೊಳಗೂ ಹೇರಳವಾಗಿ ಇಣುಕುತ್ತಿದೆ.

ಬಾನಿಯೆಂಬುದು ಕಲಾವಿದನು ಏರಬೇಕಾದ ಎತ್ತರಕ್ಕಿರುವ ಒಂದು ದಾರಿಯೇ ಹೊರತು ಅದೇ ಮೂಲವಲ್ಲ. ಎಲ್ಲಾ ಪರಂಪರೆಗಳೂ ಒಂದೇ ಗಂಗೋತ್ರಿಯ ಹಲವು ನದಿಗಳು, ಅಷ್ಟೇ. ಯಾವ ಶೈಲಿಯೂ ಮೇಲಲ್ಲ ಅಥವಾ ಕೀಳಲ್ಲ. ಅದೆಲ್ಲವೂ ಆಯಾಯ ಕಲಾವಿದನ ಪ್ರತಿಭಾ ಸಂಪನ್ನತೆಯ ಕಾಣಿಕೆ. ಅಷ್ಟಕ್ಕೂ ಪ್ರತಿಯೊಬ್ಬರಿಗೂ ಅವರದ್ದೇ ಆದ ಶೈಲಿ ನಿಲುವು ಇದೆ.ಆ ನಿಲುವುಗಳೇ ಬೆಳೆದು ಪ್ರತ್ಯೇಕ ಶೈಲಿಗಳಾಗುತ್ತವೆ. ಅದನ್ನು ಶೋಧಿಸಿಕೊಳ್ಳುವ ಪ್ರಯತ್ನಗಳಾದಾಗಲೇ ಆತ ಸೃಷ್ಟಿಶೀಲ ಕಲಾವಿದನೆನಿಸಿಕೊಳ್ಳಲು ಸಾಧ್ಯ. ಇಲ್ಲದಿದ್ದರೆ ಅಂತವರು ತಮ್ಮ ಅಥವಾ ತಾವು ಕಲಿತ ಬಾನಿ/ಶೈಲಿಯ ಮಾರ್ಕೆಟಿಂಗ್ ಮ್ಯಾನೇಜರ್‌ನಂತೆ ಆಗುತ್ತಾರೆಯೇ ಹೊರತು ಗುರುವಾಗಲೀ, ದಿಗ್ದರ್ಶಕರಾಗಲೀ ಅಲ್ಲ.

ಹೀಗಿರುವಾಗ ಬಾನಿ, ಶೈಲಿಗಳಿಗನುಸಾರವಾಗಿ ಪಠ್ಯಪುಸ್ತಕವನ್ನೋ, ಶಿಕ್ಷಣ ಕ್ರಮವನ್ನೋ ಸಿದ್ಧಪಡಿಸುವುದು; ಅದನ್ನೇ ಪರೀಕ್ಷೆ, ವಿದ್ಯಾಭ್ಯಾಸದಲ್ಲಿ ಜಾರಿಗೆ ತರುವಂತೆ ನೋಡಿಕೊಳ್ಳುವುದೋ ಅಥವಾ ಸಿದ್ಧ ಬಾನಿ ಅಥವಾ ಆಚಾರ್ಯ ಪರಂಪರೆಯ ಲೋಪ–ದೋಷಗಳನ್ನು ಎಣಿಸದೆ ಹಳೆಯದು ಪೂಜ್ಯ ಎಂದು ಯಥಾವತ್ತಾಗಿ ಕಣ್ಣು ಮುಚ್ಚಿಕೊಂಡು ಅನುಸರಿಸುವುದು ನಿಜಕ್ಕೂ ಕಲೆ ತನ್ನ ಸ್ವಾದವನ್ನು ಕಳೆದುಕೊಳ್ಳುವ ದಾರಿಗಳು. ಹಾಗಾಗಿ ಕಲಾವಿದನ ಉದ್ದೇಶ ರಸಾಸ್ವಾದನೆಗೆ, ರಸೋತ್ಪತ್ತಿಗೆ ಅನುಕೂಲವಾದ ಸೋಪಾನಗಳನ್ನು ಏರುವುದೇ ವಿನಾ ಶೈಲಿ, ಸಂಪ್ರದಾಯ, ಬಾನಿ ಎನ್ನುತ್ತಾ ತನ್ನ ಕುರ್ಚಿಗೇ ಅಂಟಿಕೊಂಡು ಅರಸಿನ ಕಾಮಾಲೆಯ ಕಣ್ಣುಗಳಿಂದ ನೋಡುವುದಲ್ಲ.

ಈ ನಿಟ್ಟಿನಲ್ಲಿ ಸಾರ್ವಕಾಲಿಕವಾಗಿ ಎಲ್ಲೆಡೆಯೂ ಅನ್ವಯವಾಗುವ, ಮೂಲಭೂತವಾದ, ಒಂದೇ ತಳಹದಿಯುಳ್ಳ ಪ್ರಾಥಮಿಕ ಶಿಕ್ಷಣ ಒದಗಿದರೇನೇ ಕಲಾ ಜಗತ್ತು ಬೇಧನೀತಿಗಳಿಂದ ಮುಕ್ತವಾಗಿ ಸಹೃದಯರಿಗೂ ಉಪಕಾರವಾದೀತು. ಇಲ್ಲವಾದರೆ ಆಯಾಯ ಪರಂಪರೆಗಳನ್ನು ಪುಷ್ಟಿಗೊಳಿಸುವುದೋ, ಕಲಿಯುವುದಕ್ಕೋ ಕಲೆ ಸೀಮಿತವಾದೀತು.

**ಪ್ರೀತಿಯಿಂದ,**
**ಸಂಪಾದಕರು**



ತಾಮ್ರಚೂಡ ಹಸ್ತ

# ಹಸ್ತ ಮಯೂರಿ

ತಾಮ್ರಚೂಡ ಎಂದರೆ ಕೋಳಿ ಎಂದರ್ಥ. ಇದು ಮಿಶ್ರಹಸ್ತ ಪ್ರಕಾರಕ್ಕೆ ಸೇರಿದ್ದು. ಅಭಿನಯದರ್ಪಣದ ಪ್ರಕಾರ ಲಕ್ಷಣ: ಮಧ್ಯ ಮತ್ತು ಹೆಬ್ಬೆರಳ ತುದಿಯನ್ನು ಕೂಡಿಸಿ ತೋರುಬೆರಳನ್ನು ಬಾಗಿಸಬೇಕು. ಉಳಿದ ಉಂಗುರ ಮತ್ತು ಕಿರುಬೆರಳನ್ನು ಅಂಗೈ ತಳದಲ್ಲಿ ಮಡಿಸಿ ಹಿಡಿಯಬೇಕು. ಸಾರಸಂಗ್ರಹದ ಪ್ರಕಾರ ಹೆಬ್ಬೆರಳು ಕಿರುಬೆರಳನ್ನು ಕೂಡಿಸಿ ಉಳಿದ ಮೂರು ಬೆರಳನ್ನು, ನೀಡಿ ಹಿಡಿಯಬೇಕು. ಸಂಗೀತ ರತ್ನಾಕರದಲ್ಲಿ ಈ ಹಸ್ತಕ್ಕೆ ಎರಡೂ ಲಕ್ಷಣಗಳಿವೆ. ಹಸ್ತ ಮುಕ್ತಾವಳಿ ಮತ್ತು ಸಂಗೀತ ರತ್ನಾಕರದಲ್ಲಿ ಮಧ್ಯ ಮತ್ತು ಹೆಬ್ಬೆರಳನ್ನು ಮಾತ್ರ ಸೇರಿಸಿ ತೋರು ಮತ್ತು ಕಿರುಬೆರಳನ್ನು ಅಂಗೈಯೊಳಗೆ ಮಡಚುವಂತೆ ಮಾಡುವುದು ಒಂದು ವಿಧವಾದರೆ, ಕಿರುಬೆರಳನ್ನು ನಿಡಿದಾಗಿರಿಸುವುದು ಮತ್ತೊಂದು ವಿಧ. ಸಾರಂಗದೇವನು ಇದನ್ನು ಚೋಟಿಕಾ ಎಂದು ಕರೆದಿದ್ದರೆ, ಅಭಿನವಗುಪ್ತನು ಚೂಡಾಮುಕ್ತ, ಕುಕ್ಕುಟಕಾರತ್ವಾತ್ತಮ್ರಚೂಡಾ ಎಂದಿದ್ದಾನೆ.

ಮೂರು ವೇದಗಳು ಬ್ರಹ್ಮನಿದಿರು ಮನುಷ್ಯರೂಪದಲ್ಲಿ ಬಂದು ನಿಂತಾಗ ಉಂಟಾದ ಹಸ್ತ. ದೇವ ವರ್ಣ, ಈ ಹಸ್ತದ್ದು ಕಪ್ಪೆಚಿಪ್ಪಿನ ಬಿಳಿ ಬಣ್ಣ, ಋಷಿ : ಇಂದ್ರ, ಅಧಿದೇವತೆ : ಬೃಹಸ್ಪತಿ.

**ಶಾಸ್ತ್ರೀಯ ಮುದ್ರೆಗಳ** ಪೈಕಿ **ಅಂಕುಶ ಮುದ್ರಾ** ಎಂಬುದು ತಾಮ್ರಚೂಡವೇ ಆಗಿದ್ದು; ತೋರು ಬೆರಳನ್ನು ಮೇಲಿನಿಂದ ಬಗ್ಗಿಸಿ ಉಳಿದ ಬೆರಳುಗಳನ್ನು ಹೆಬ್ಬೆರಳಿಗೆ ಕೆಳಭಾಗದಲ್ಲಿ ಬಗ್ಗಿಸಿ ಸೇರಿಸುವುದು ಇದರ ಲಕ್ಷಣ. ಈ ಮುದ್ರೆಯು ಆಕರ್ಷಣ ಮತ್ತು ಮೋಹಿನಿ ಮಂತ್ರಗಳ ಪಠಣ ಫಲಕಾರಿಗೆ ಸಹಕಾರಿ ಎಂದು ನಂಬಲಾಗಿದೆ. **ಭರತಾರ್ಣವದಲ್ಲಿ** ತಿಳಿಸುವ **ಸ್ಥಾನಕ** ವಿಧಗಳ ಪೈಕಿ ಒಂದಾದ **ಚಂದ್ರಿಕಾಕ್ಕೆ** ತಾಮ್ರಚೂಡದ ಸಹಕಾರ ಬೇಕು. ಅಂತೆಯೇ ದೇಹದ ಅವಯವ ಚಲನೆಗಳ ಅಂದರೆ ಅಡವಿನ ಪೈಕಿ ಒಂದಾದ **ತಟ್ಟುಮೆಟ್ಟಡವಿನ** ಸೌಂದರ್ಯಕ್ಕೆ ತಾಮ್ರಚೂಡದ ಬಳಕೆಯಿದೆ.

**ವಿನಿಯೋಗ** : ಕೋಳಿ, ಬಕಪಕ್ಷಿ, ಕಾಗೆ, ಒಂಟೆ, ಕರು, ಬರೆವಣಿಗೆ, ಮತ್ತು ಕುಕ್ಕುಟ ವರ್ಗದ ಪಕ್ಷಿಗಳು.

**ಇತರೇ ವಿನಿಯೋಗ** : ಬೈಯ್ಯುವುದು, ಕಾಲಸೂಚನೆ, ಮಂತ್ರದ ಚಿಟಿಕೆಹಾಕುವುದು, ಕೋಳಿ–ನಾಯಿಯನ್ನು ಕರೆಯುವುದು, ಯಾರನ್ನಾದರೂ 'ಛೀ' ಹಾಕುವುದು, ತಾಳ ಹಿಡಿಯುವುದು, ವಿಶ್ವಾಸ ಸೂಚನೆ ಅಥವಾ ಹುಟ್ಟಿಸುವುದು, 'ಹುಂ, ಬೇಗ' ಎಂದು ಸೂಚಿಸಲು, ಹುಡುಗರನ್ನು ಕರೆಯುವುದು, ಸಂಗೀತದ ಮಟ್ಟುಗಳು, ಶೈಘ್ರ್ಯ, 3 ವೇದಗಳು, ಆಶ್ವಾಸನೆ, ಸಾವಿರ ಮೊದಲಾದ ಸಂಖ್ಯೆಗಳನ್ನು ತೋರಿಸುವಾಗ, ತ್ರಿಮೂರ್ತಿಗಳು, ಹೆಣ್ಣುಕುರಿ, ಮೂರುಲೋಕ, ಚತುರ್ವರ್ಣಗಳು, ಪಣನೋಟ, ತ್ರಿಕೂಟ ಪರ್ವತ, ತ್ರಿಮೂರ್ತಿಗಳ ದರ್ಶನ, ಗದ್ದೆಯಲ್ಲಿ ಬೀಜ ನಾಟಿ ಮಾಡುವುದು, ಅರುಣಪರ್ವ, ಜಾಗ್ರತೆಯಾಗಿ ಉಸಿರುಬಿಡುವುದು, ಮೂರು ಶಬ್ದಗಳು, ದೇವ ಜಾತಿ, ಬಿಳಿ ಬಣ್ಣ, ಕಿಡಿಗಳು, ಬಿಂದುಗಳು, ಬಾಲೆಯೊಡನೆ ಮಾತು, ಆಹ್ವಾನ, ಬತ್ತಿ ಮಾಡುವುದು, ನೂರು–ಸಾವಿರ– ಲಕ್ಷ ಚಿನ್ನದ ವರಹಗಳು ಇತ್ಯಾದಿಗಳ ಸೂಚನೆಗೆ ಉಪಯೋಗವಾಗುತ್ತದೆ.

ಮುದ್ರೆ, ಆಕಳಿಸುವುದು, ಶೀಘ್ರ, ಬೆಂಕಿಕಿಡಿ, ನೀರಿನ ಅಥವಾ ಯಾವುದೇ ದ್ರವದ ಹನಿ, ಬೆಳ್ಳಿ, ಗರ್ಜನೆ, ಮಕ್ಕಳ ನೃತ್ಯ, ಗುಡುಗು–ಮಿಂಚು, ಮಕ್ಕಳನ್ನು ಎಬ್ಬಿಸುವುದು, ಚಿನ್ನ, ಕೆಂಪು ಕಡ್ಡಿ, ಕಾಳಿ ಯುಗ, ತಾಮ್ರ, ಕಂಚು, ಸೀಸ, ಕಬ್ಬಿಣ, ಲೋಹಗಳು, ಎಣಿಸುವುದು, ಕೂದಲು, ನವಿಲಿನ ಬಾಲ, ಗಂಟೆಗಳನ್ನು ಮಾಡುವ ಮಿಶ್ರಲೋಹ, ನೂರು, ಸಾವಿರ, ಲಕ್ಷ, ಕೋಟಿ, ದಶಲಕ್ಷ, ದಶಕೋಟಿ, ಶತಕೋಟಿ, ಸಾವಿರಕೋಟಿ, ಲಕ್ಷಕೋಟಿ, ದಶಲಕ್ಷಕೋಟಿ, ಅಪರಿಮಿತ, 1/6 ಭಾಗ, 1/13 ಭಾಗ, ನಿಮಿಷ, ಸೂಕ್ಷ್ಮ, ನೀರಿನ ಸಣ್ಣ ಅಂಶ, ಆಗ ತಾನೇ ಹೆತ್ತ ಬಾಣಂತಿಯ ನೋಟ, ಮಳೆ, ಕಣ್ರೆಪ್ಪೆ ಮುಚ್ಚು–ತೆರೆಯುವುದು, ಜನ್ಮ, ವಾಮನಾವತಾರ, ಪ್ರಾಣಿಗಳ ಜುಟ್ಟು ಇತ್ಯಾದಿಗಳ ಸಂವಹನಕ್ಕೆ ಬಳಸಲಾಗುತ್ತದೆ.

**ಸಂಕರ ಹಸ್ತ** ವಿಭಾಗದಲ್ಲಿ ತಾಮ್ರಚೂಡವನ್ನು ಅಡ್ಡಲಾಗಿ ಹಿಡಿದರೆ ಕೆಂಪು ಬಣ್ಣ ಎಂದು ಅರ್ಥ. ಭರತಾರ್ಣವ ಹೇಳುವ **ಅರ್ಧನಾರೀಶ್ವರ ಹಸ್ತಕ್ಕೆ** ಬಲಗೈಯ್ಯಲ್ಲಿ ಪದ್ಮಕೋಶವನ್ನೂ, ಎಡಗೈಯ್ಯಲ್ಲಿ ತಾಮ್ರಚೂಡವನ್ನೂ ಹಿಡಿದು ನಿಲ್ಲಬೇಕು. ಭರತಸಾರ ಹೇಳುವಂತೆ **ಶನೈಶ್ಚರ ಹಸ್ತಕ್ಕೆ** ಶುಕತುಂಡ ಹಸ್ತವನ್ನು ಎಡಕೈಯ್ಯಲ್ಲಿ ಹಿಡಿದು, ಎಡ ತೊಡೆಯ ಮೇಲಿರಿಸಿ ಮುಷ್ಟಿ ಹಸ್ತಕ್ಕೆ ಬದಲಾಯಿಸಿ ಹಸ್ತವನ್ನೂ ಅಂಗೈನ ಮೇಲೂ ಕೆಳಗೂ ಆಗುವಂತೆ ಚಲಿಸುವುದು. ಬಲಕೈಯ್ಯಲ್ಲಿ ತಾಮ್ರಚೂಡವನ್ನು ಹಿಡಿಯಬೇಕು. **ಶ್ಯಾಲಕಹಸ್ತ** (ಹೆಂಡತಿಯ ಸಹೋದರ; ಭಾವಮೈದುನ)ಕ್ಕೆ ಮೊದಲು ಕಟಕಾಮುಖ ಹಸ್ತವನ್ನು ಹಿಡಿದು, ಆನಂತರ ತಾಮ್ರಚೂಡ ಹಸ್ತವನ್ನು ಪ್ರದರ್ಶಿಸಬೇಕು. **ಸಮಯಸೂಚಿ ಹಸ್ತ**ಗಳಲ್ಲಿ ಒಂದಾದ ತ್ರಿಯಾಮ ಅಂದರೆ 9 ಗಂಟೆಯನ್ನು ಸೂಚಿಸಲು, ಗಂಗಾನದೀ, ಅಶ್ವಿನೀ ಮತ್ತು ಪೂರ್ವ( ಹುಬ್ಬಾ) ನಕ್ಷತ್ರದ ಸೂಚನೆಗೆ ತಾಮ್ರಚೂಡವನ್ನು ಹಿಡಿಯಬೇಕು. ತಾಮ್ರಚೂಡವನ್ನು ಒಂದು ಬದಿಗೆ ಹಿಡಿಯುವುದು ಕೆಂಪುಬಣ್ಣವನ್ನು ಸೂಚಿಸಿದರೆ; ಖದಿರ ವೃಕ್ಷ ಸೂಚನೆಗೆ ಎರಡೂ ಕೈಯಲ್ಲಿ ತಾಮ್ರಚೂಡ ಹಿಡಿದು ಅಧೋಮುಖವಾಗಿರಿಸಬೇಕು.

**ಒಡಿಸ್ಸಿಯಲ್ಲಿ** ತಾಮ್ರಚೂಡಕ್ಕೆ **ಶುಕಚಂಚು ಆಥವಾ ಅಂಕುಶ**ವೆಂದು ಹೆಸರು. ಇದು ಗಣೇಶನ ಮುದ್ರೆಯೆಂದು ಬಳಕೆಯಲ್ಲಿದೆ. **ಯಕ್ಷಗಾನ**ದಲ್ಲಿ ಗಿಳಿ, ಹಕ್ಕಿ, ಕರುಗಳ ಸೂಚನೆಗೆ ಬಳಸುತ್ತಾರೆ. **ಕಥಕಳಿಯಲ್ಲಿ** ತಾಮ್ರಚೂಡಕ್ಕೆ **ಶುಕತುಂಡ**ವೆನ್ನುತ್ತಾರೆ. ವಿನಿಯೋಗ : ಗಜಕುಂಭ, ಪಕ್ಷಿ, ನಿಶ್ಚಯ.

**ನಿತ್ಯಜೀವನ**ದಲ್ಲಿ ಈ ಹಸ್ತವನ್ನು ತುರಿಸಲು, ವಸ್ತುವನ್ನು ಕೆರೆಯಲು, ಕೊಂಕು ಎನ್ನಲು, ಹಂಗಿಸಲು, ಕೊಕ್ಕೆ ಎನ್ನಲು, ಕುಣಿಕೆ, ತಲೆ ತುರಿಸುತ್ತಾ ಯೋಚನೆ ಮಾಡಲು, ಹೀನವಾಗಿ ಕರೆಯಲು ಬಳಸುತ್ತಾರೆ. ✽




**ಸಂಚಿಕೆಗಾಗಿ ಸಹಕರಿಸಿದವರು**

**ಸ್ವಾತಿ ರಾಮಕೃಷ್ಣ ಭಟ್**
**ಕುರುಂಬಡೇಲು, ಬೆಳ್ಳಾರೆ, ಸುಳ್ಯ**
**ದಕ್ಷಿಣ ಕನ್ನಡ**

ಲಲಿತ ಲಹರಿ

## ಅಷ್ಟನಾಯಿಕಾ ಚಿತ್ತವೃತ್ತಿ

# ಅಭಿಸಾರಿಕಾ ನಾಯಿಕೆ

**(ಕಳೆದ ಸಂಚಿಕೆಯಿಂದ ಮುಂದುವರೆದುದು...)**

ಪ್ರಿಯನ ಸಂದೇಶವನ್ನನುಸರಿಸಿ ಅರಸುತ್ತಾ ಇಲ್ಲವೇ ಪ್ರೇಮ–ಕಾಮಪೀಡಿತಳಾಗಿ ತನ್ನ ಇನಿಯನನ್ನು ತಾನಾಗಿ ಹುಡುಕಿಕೊಂಡು ಹೋಗುವವಳು ಅಥವಾ ತನ್ನ ಪ್ರಿಯನನ್ನು ಸಖಿಯರ ಕಡೆಯಿಂದ ಕರೆಸಿಕೊಳ್ಳುವವಳು ಅಭಿಸಾರಿಕೆ. ಈಕೆಯ ಅಭಿಸರಣದ ಸ್ಥಾನಗಳು : ಸಸ್ಯಸಂಪತ್ತಿನ ಭೂಮಿ, ನಿರ್ಜನ ಪ್ರದೇಶ, ಜೀರ್ಣಾವಸ್ಥೆಯ ದೇವಾಲಯ, ದೂತಿಯ ಮನೆ, ಅರಣ್ಯ, ನದೀ ತಟಾಕ, ಉಪವನ, ಉದ್ಯಾನ, ಸ್ಮಶಾನ, ಸಮುದ್ರತೀರ, ಸೇತುವೆ ಇತ್ಯಾದಿ. ಭಾನುದತ್ತನು ತನ್ನ ಗ್ರಂಥ ರಸಮಂಜರಿಯಲ್ಲಿ ಅಭಿಸಾರಿಕೆಯನ್ನು ಮೂರು ವಿಧವಾಗಿ ವಿಂಗಡಿಸಿದ್ದಾನೆ.

1. ದಿವಸಾಭಿಸಾರಿಕಾ : ಹಾಡುಹಗಲಿನಲ್ಲಿ ನಲ್ಲನೆಡೆಗೆ ಸಾಗುವವಳು.
2. ಜೋತ್ಸ್ನಾಭಿಸಾರಿಕಾ : ತನ್ನ ಪ್ರಿಯನನ್ನು ಹುಡುಕಿಕೊಂಡು ಚಂದ್ರನ ಬೆಳಕಿನಲ್ಲಿ ಸಾಂಕೇತಿಕ ಸ್ಥಳಕ್ಕೆ ಹೋಗುವವಳು.
3. ತಮಿಸ್ರಾಭಿಸಾರಿಕಾ ( ಕೃಷ್ಣಾಭಿಸಾರಿಕಾ) : ಕಟ್ಟಿರುಳಿನಲ್ಲಿ ಬೆದರದೆ ತನ್ನ ಪ್ರಿಯನಿಗಾಗಿ ಹೋಗುವವಳು.

ಈ ನಾಯಿಕೆಯಲ್ಲೂ ಉತ್ತಮ, ಮಧ್ಯಮ, ಅಧಮ ಅಥವಾ ಸ್ವೀಯಾ, ಪರಕೀಯ, ಸಾಮಾನ್ಯವೆಂಬ ಬೇಧಗಳಿದ್ದು ಅದು ಈಕೆಯ ಅವಸ್ಥೆಗಳನ್ನು ಅವಲಂಬಿಸಿರುತ್ತದೆ. ಸಹಜವಾಗಿ ಉತ್ತಮ ನಾಯಿಕೆಯದ್ದು ಹೆಚ್ಚೇನೂ ಅಭಿನಯಕ್ಕೆ ಅವಕಾಶ ನೀಡದ ಆದರೆ; ಉನ್ನತ ಮಟ್ಟದ, ಗಂಭೀರ, ಮೃದು ವರ್ತನೆಯುಳ್ಳ ಭಾವಪ್ರಕಾಶ. ಮಧ್ಯಮವು ಮನುಷ್ಯ ಸಹಜ ಮಿಶ್ರ ಭಾವನೆಗಳ ಪ್ರತಿರೂಪ. ಅಧಮನಾಯಿಕೆಯು ನೀಚ ಇಲ್ಲವೇ ಭಾವನೆಯನ್ನು ಹಿಡಿತವಿರಿಸದೆ ಯಥಾಸ್ಥಿತಿಯಲ್ಲಿ ಹರಿಬಿಡುವ, ಅಥವಾ ಗೌರವಯುತ ನಡವಳಿಕೆಗಳ ಬದಲಾಗಿ ಎಂದಿನಂತೆಯೇ ಇದ್ದು ; ಅನೌಚಿತ್ಯಕರವಾಗಿ ಕಾಣಿಸಿಕೊಳ್ಳುವವಳು.

ಅಭಿಸಾರಿಕೆಯು ಸರ್ವಾಂಗಭೂಷಿತೆಯಾಗಿ ಲಜ್ಜೆಯಿಂದ ಸಾಗುವವಳಾದರೆ ಆಕೆ ಸ್ವೀಯ. ತನ್ನ ಸಂಗಾತಿ–ಸಂಬಂಧಿಗಳನ್ನೊಳಗೊಂಡು ತನ್ನ ಇರವನ್ನು ತೋರ್ಪಡಿಸುತ್ತಾ ಸಾಗುವವಳು ಪರಕೀಯೆ. ಧೈರ್ಯದಿಂದ, ಮುಸ್ಸಂಜೆ–ಮಧ್ಯರಾತ್ರಿಯ ವೇಳೆಗಳಲ್ಲಿ ವಿಚಿತ್ರ ಹಾಗು ಸುಂದರ ವಸ್ತ್ರಾಭರಣಗಳನ್ನು ತೊಟ್ಟು ಸಂಗಾತಿಗಳೊಡನೆ ಪುರುಷರ ಮನಸ್ಸನ್ನು ಸೂರೆಗೊಳಿಸುತ್ತಾ, ಗೆಜ್ಜೆ–ಕಡಗಗಳನ್ನು ಸದ್ದುಗೊಳಿಸುತ್ತಾ, ಆನಂದದಿಂದ ನಗುತ್ತಾ, ಕಾಮವಿಕಾರದಿಂದ ತೊದಲಾಗಿ ಮಾತನಾಡುತ್ತಾ, ವಿಲಾಸದಿಂದ ಕಣ್ಣುಗಳನ್ನು ವಿಕಸಿಸಿ ಎಡವುತ್ತಾ

ಹೋಗುವವಳು ಸಾಮಾನ್ಯೆ. ಉತ್ತಮಳಿಗೆ ಸಮಯಾಸಮಯದ ಪರಿವೆಯೇ ಇರದೆ, ಧೈರ್ಯವೇ ಆಯುಧವಾದರೆ, ಮಧ್ಯಮಳಿಗೆ ಬೇರೊಬ್ಬರ ಸಹಾಯ ಬೇಕು. ಅಧಮಳಿಗೆ ಉತ್ತಮ ವೇಳೆ ಒದಗಬೇಕು.

ಸ್ವೀಯಾ ಅಂದರೆ ಪತಿಗೆ ನಿಷ್ಠಳಾದ ಪತ್ನಿ. ಪರಕೀಯಳು ಪತಿಯ ಹೊರತಾಗಿಯೂ ಇನ್ನೊಬ್ಬರಲ್ಲಿ ಅನುರಾಗ ಹೊಂದಿರುವವಳು, ಸಾಮಾನ್ಯೆಯು ವೇಶ್ಯೆಯೇ ಆಗಿರುತ್ತಾಳೆ. ಇಷ್ಟೇ ಅಲ್ಲದೆ ಅಷ್ಟವಿಧ ನಾಯಿಕೆ ಅಥವಾ ಮೇಲ್ಕಂಡ ಮೂವರು ಶೃಂಗಾರ ನಾಯಿಕೆಯರು ಮುಗ್ಧಾ, ಮಧ್ಯಾ ಮತ್ತು ಪ್ರಗಲ್ಭ ಸ್ಥಿತಿಯ ಪೈಕಿ ಯಾವುದಾದರೂ ಒಂದು ವರ್ಗಕ್ಕೆ ಸೇರಿರುವುದೂ ಇದೆ. ಮುಗ್ಧಾ ನಾಯಿಕೆಯು ಮುಗ್ಧೆ, ಬಾಲ್ಯ ಯೌವನಗಳ ಸಂಧಿಕಾಲದಲ್ಲಿರುವವಳು. ಲಜ್ಜೆಯ ವರ್ತನೆ, ಅನುರಾಗದ ಕುರಿತಾಗಿ ಅಷ್ಟೇನೂ ಅರಿವಿಲ್ಲದ ಮೃದು ಸ್ವಭಾವದವಳಾಗಿರುತ್ತಾಳೆ. ಆಕೆಗೆ ಎಲ್ಲವೂ ಹೊಸತು, ಮೊದಲು. ಮಧ್ಯಾ ನಾಯಿಕೆಯು ಮುಗ್ಧಾಳಿಗಿಂತ ಕೊಂಚ ಹೆಚ್ಚಾದ ಅರಿವಿರುವ ಯೌವನಾವಸ್ಥೆ ವ್ಯಾಪಿಸಿರುವವಳು. ಹೆಚ್ಚು ಲಜ್ಜೆ ಮತ್ತು ಕಾಮವಿಕಾರವುಳ್ಳ ಈಕೆಯದ್ದು ಚಾತುರ್ಯಭರಿತ ವರ್ತನೆ. ಪ್ರಗಲ್ಭೆಗೆ ಕಾಮಾಸಕ್ತಿ ಹೆಚ್ಚು, ರತಿಕ್ರೀಡೆಗಳಲ್ಲಿ ಪ್ರವೀಣಳು. ಲಜ್ಜೆ ಅತೀಕಡಿಮೆ. ಇವುಗಳೊಳಗೂ ಧೀರ, ಅಧೀರ, ಧೀರಾಧೀರ ಹಾಗೂ ಜ್ಞಾತ, ಅಜ್ಞಾತ, ಪ್ರೌಢ, ನವೋಢ, ಲಘು, ಗುರುವೆಂಬ ಹಲವಾರು ಬೇಧಗಳಿವೆ.

ಪ್ರಸ್ತುತ ಕಾವ್ಯ ಮತ್ತು ಭಾವಾಭಿವ್ಯಕ್ತಿಯಲ್ಲಿ ನೀಡಲಾಗಿರುವ ನಾಯಿಕೆಯು ಉತ್ತಮ–ಮಧ್ಯಮ ಗುಣವುಳ್ಳ; ಸ್ವೀಯಾ, ಮಧ್ಯಾ, ಜ್ಞಾತ, ಪ್ರೌಢ ಸ್ವಭಾವವುಳ್ಳವಳಾಗಿದ್ದು; ನರ್ತನದಲ್ಲಿ ಅಭಿನಯಕ್ಕೆ ಹೆಚ್ಚು ವಿಸ್ತಾರವನ್ನು ಕಲ್ಪಿಸಿಕೊಡುವ ಮತ್ತು ಮಾದರಿಯ ಜೀವನದ ಆಯಾಮವಿರುವುದರಿಂದ; ಈ ಅಷ್ಟನಾಯಿಕಾ ಚಿತ್ತವೃತ್ತಿಯ ಹಾದಿಯಲ್ಲಿ ಮಧ್ಯಮನಾಯಿಕೆಯನ್ನೇ ಪ್ರಧಾನವಾಗಿ ಎಲ್ಲಾ ನಾಯಿಕೆಯರಿಗೂ ಅಳವಡಿಸಿ ಸಾಹಿತ್ಯವನ್ನು ನೀಡಲಾಗಿದೆ. ದಿವಾಕರ ಹೆಗಡೆಯವರ ಕವಿತ್ವವು ಭೂಮಿ, ಪ್ರಕೃತಿ, ಮಳೆ, ಬಾನು ಇತ್ಯಾದಿ ಪ್ರಾಕೃತಿಕವಾಗಿ ನಿರೂಪಿಸಲ್ಪಟ್ಟ ಸೆಲೆಯನ್ನು ಹೊಂದಿದೆ.

ಬನ್ನಿ, ನಮ್ಮ ಕಲ್ಪನಾ ಸಾಮರ್ಥ್ಯ, ಅನುಭವ–ಅನುಭಾವ, ವಿಶ್ಲೇಷಣೆ, ನಾಟ್ಯದ ಆಯಾಮ, ಸವಾಲು–ಸಾಧನ, ಅಭಿವ್ಯಕ್ತಿಯ ಕ್ಷಿತಿಜ, ರಸದೃಷ್ಟಿ, ಕಾವ್ಯದೃಷ್ಟಿ ಮತ್ತು ಅರಿವಿನ ಹರಹುವಿನ ವಿಸ್ತಾರದಲ್ಲಿ ಕೈಜೋಡಿಸೋಣ. ನಮ್ಮ ಕಲ್ಪನೆ–ಚಿಂತನೆಗಳಿಗೆ ಇದು ಮುಕ್ತ ವೇದಿಕೆಯಾಗಲಿ.

## ಮೇಘಮೇದಿನಿ

– ದಿವಾಕರ ಹೆಗಡೆ, ಧಾರವಾಡ

ಶಿಶಿರೋದಯದಲಿ ಹೊಸಕನಸಿನ ಹದ
ವಸುಮತಿ ತಾನೆಸೆದಳು ಮುದದಿ ।
ವಸನಾಪ್ಯಾಯನ ಕುಸುರಿನ ರೇಶಿಮೆ
ರಸೆ ರಾಣಿಯು ತಾ ಸಮ್ಮುದದಿ ॥

# ಭಾಮಿನೀ

– ಶತಾವಧಾನಿ ಡಾ. ಆರ್. ಗಣೇಶ್

**ಶುದ್ಧಸಾವೇರಿ ರಾಗ : ಶಾರ್ದೂಲ ವಿಕ್ರೀಡಿತ**
ನಲ್ಲಂ ತಾಂ ಬರಲಿಲ್ಲಮೇತಕೊ ಅದಂತಿರ್ಕಾನೆ ಪೋಪೆಂ ಸಮು
ತ್ಫುಲ್ಲಂ ಗೊಳ್ವನವಂ ಗಡಂ ಪರಿಕಿಸುತ್ತೆನ್ನಂ ಮಲರ್ದೆಂದು ಮೇ
ಣುಲ್ಲಾಸಂ ಬಿರಿದುಣ್ಮೆ ಧೀರಲಲಿತವ್ಯಾಹಾರದಿಂ ಪೋಗುವಳ್
ಗುಲ್ಲಂ ಸೀಳ್ದಭಿಸಾರಿಕಾಖ್ಯೆ ಮಿಹಿರಂ ಮುನ್ನೀರ್ಗೆ ಸೇರ್ವನ್ನೆಗಂ ॥

**ಪೂರ್ವಿ ಕಲ್ಯಾಣಿ ರಾಗ : ಮತ್ತೇಭವಿಕ್ರೀಡಿತ**
ನರುಗೆಂಪಾಗೆ ದಿಗಂತಮುಂ ವದನಮುಂ ವಿಸ್ಫಾರಿಸಲ್ ಸಾಂಧ್ಯವ
ಲ್ಲರೀಮಲ್ಲೀಸುಮಮುಂ ಹೃದಯಸ್ಥರತಿಯುಂ ಪೆಂಪಯ್ದೆ ಲೀಲಾವನೀ
ಧರೆಯುಂ ಪೇಶಲಕಾಯಮುಂ ರುಚಿರಸಂಕೇತಸ್ಥಲಕ್ಕೇಗೆ ಖೇ
ಚರಿಯುಂ ಚಿತ್ತಮುಮಾಗಳೊಪ್ಪಿದುದಲಾ ರಸ್ಯಾಭಿಸಾರಂ ಕರಂ ॥
( ಸಂಜೆಯಾಯಿತು, ತವಕ ಬಲಿಯಿತು. ಇನಿಯನನ್ನೇ ಅರಸಿ
ಅದಮ್ಯಕಾಂಕ್ಷೆಯಿಂದ ಅಭಿಸಾರಿಕೆಯಾಗಿ ನಾಯಿಕೆಯು ತೆರಳುವಳು.)

**ಮಾಂಡ್ ರಾಗ : ಏಕ, ರೂಪಕ, ಕೋರೆ ತಾಳಗಳು**
ಎನಗಿಲ್ಲ ಭಯಕಾರಣ–ವಿಚಾರಣ ।
ಮನದಾಣ್ಮನೆಡೆ ಸಾರಲು– ಯಾವಾಗಲೂ ॥ ಪ ॥

ಜಗದಾಡಿಕೆಯ ಕೇಳೆನಭಿಜಾತರಿಗೆ ಸೋಲೆ
ನಗಡಿಪ್ಪ ಮಳೆಗಾಳಿಗಳಿಗಂಜೆನು ।
ಸೊಗಸಲ್ಲಿ ಸಲ್ಲಲ್ಕೆ ಮಿಗೆ ತರ್ಕ–ಶಂಕೆಯೆ ?
ನಗಲೇಕೆ ? ನಾ ಬಲ್ಲೆನಾ ಸವಿಯನು ॥

ಬೆನ್ನಟ್ಟಿ ಸುಮಬಾಣಂ ಬರ್ಪನ್ನಮೆಲ್ಲ ಸಂ
ಪನ್ನೆಯರೇ ಪೆರ್ಮೆಕೆನ್ನೆಯರೇ ।
ಚೆನ್ನಿಗನವನಲ್ಲಿ ಜೊನ್ನಪಾಲ್ಬೆಳಕಲ್ಲಿ
ಮನ್ನಿಸೆ ಮೆಯ್ ಬಿಗಿ ಬಿಡದಿರ್ಪರೇ ?

ಮುಗಿಲೆ ಮಳೆಯಿಂ ಕಳಚಿ ಬೀಳಲಿ
ಜಗವೆ ಸಿಡಿಲಿಂ ಸಿಡಿಯಲಿ ।
ಕವಿವ ಕತ್ತಲೆ ಕಣ್ಣ ಕಳೆಯಲಿ
ಬುವಿಯೆ ಬಿಮ್ಮನೆ ಬಿರಿಯಲಿ ॥

# ಭಾಮಿನಿಯ ಭಾವಾಭಿವ್ಯಕ್ತಿ

– ಮಂಟಪ ಪ್ರಭಾಕರ ಉಪಾಧ್ಯ



ಇದ್ದಕ್ಕಿದ್ದಂತೆ ಹೊರಗಿನ ಬದಲಾದ ಪ್ರಕೃತಿ ನನ್ನನ್ನು ಸೆಳೆಯಿತು. ಓಡಿ ಬಂದು ಹೊರ ನೋಡಿದೆ. ವ್ಹಾ ! ಬೀಸುತ್ತಿರುವ ತಂಗಾಳಿ; ಮಾದಕತೆಯ ಸುವಾಸನೆಯೊಂದಿಗೆ (ಕಾಲ ವಸಂತಕಾಲ). ಸೂರ್ಯನ ತಾಪ ಕಡಿಮೆಯಾಗಿ ಅಲ್ಲಲ್ಲಿ ಮೋಡಗಳ ದಿಬ್ಬಣ. ಆಗಷ್ಟೇ ನಾಲ್ಕಾರು ಮಳೆಹನಿಗಳು ಬಿದ್ದು ನೆಲಸುಟ್ಟ ವಾಸನೆ. ಈ ಮಳೆಹನಿಗಳಿಂದ ಭೂಮಿ ಉನ್ಮಾದಗೊಂಡಂತೆ ಅನಿಸಿತು. ಮೋಡಗಳಿಂದ ಉನ್ಮಾದಗೊಂಡ ನವಿಲುಗಳು ಗರಿಬಿಚ್ಚಿ ನರ್ತಿಸುತ್ತಿದ್ದವು. ಪಕ್ಷಿಗಳೆಲ್ಲ ತಮ್ಮ ತಮ್ಮ ಭಾಷೆಗಳಲ್ಲಿ ಹಾಡುತ್ತಿದ್ದವು. ಇವುಗಳಿಗೆಲ್ಲ ಪಾಠ ಹೇಳಿಕೊಡುವಂತೆ ಗುರುವಿನ ಹಾಗೆ ಶ್ರುತಿಯಲ್ಲಿ ಹಾಡುತ್ತಿತ್ತೊಂದು ಕೋಗಿಲೆ. ತುಂಬಿದ ಮರಗಳು ಬೀಸುತ್ತಿರುವ ಗಾಳಿಗೆ ಓಲಾಡುತ್ತಿದ್ದವು. ಇಡೀ ಪ್ರಕೃತಿಯೇ ನಿಗೂಢ ವ್ಯತ್ಯಾಸಕ್ಕೆ ಸ್ಪಂದಿಸುತ್ತಿರುವುದನ್ನು ಕಂಡೆ. ಎಲ್ಲಾ ಶ್ರುತಿವಾದ್ಯಗಳು ಒಮ್ಮೆಲೇ ಮಂಗಳಾರತಿಗೆ ಬಾರಿಸಿದಂತೆ ಭಾವುಕತೆಗೆ ಮಾತ್ರ ಒಳಗಾದೆ. ನನ್ನ ಶ್ರುತಿ ಧ್ವನಿಗೂಡಲೇ ಇಲ್ಲ. ತೆರೆದಬಾಯಿ, ತೆರೆದ ಕಣ್ಣು ಹಾಗೇ ಇತ್ತು.

ಅಂಗಳದಲ್ಲಿ ಹೂವು ಮತ್ತು ಬಣ್ಣ ಬಣ್ಣದ ತರಗೆಲೆಗಳ ಪಟಪಟ ಸದ್ದು. ರಭಸದ ಗಾಳಿಗೆ ಇವು ಅರ್ಧವೃತ್ತಾಕಾರದಲ್ಲಿ ಸೈನಿಕರಂತೆ ನಿಂತಾಗ ಗಾಳಿ ನಿಂತಿತು. ಈ ದೃಶ್ಯ ಕಂಡಾಗ ಮನ್ಮಥನ ಹೂಬಾಣದಂತೆ ಕಂಡಿತು. ಇದು ಎಲ್ಲಿಂದ? ಯಾಕೆ? ಅಂಗಳಕ್ಕಿಳಿದು ತಲೆ ಎತ್ತಿ ಕಂಡೆ. ಆಗಸದಲ್ಲಿ ಸಪ್ತವರ್ಣದ ಕಾಮನಬಿಲ್ಲು ಪ್ರಾಯಶಃ ನನ್ನ ಪರಿಸ್ಥಿತಿ ಅರಿತು ಕಾಮನಬಿಲ್ಲನ್ನು, ಈ ಹೂಬಾಣವನ್ನು ನನ್ನೆಡೆಗೆ ಕಳಿಸಿದನೇ? ಈ ಸುಂದರ ಹೊಂದಿಕೆಯಿಂದ ಪರವಶಳಾದೆ. ಪ್ರಕೃತಿಯಲ್ಲೂ ನಾನು ಒಬ್ಬಳಾದೆ. ನೂರಾರು ಭಾವಗಳು ಬೆಂಕಿಯಂತೆ ಸುಡುತ್ತಿದ್ದವು. ಇನ್ನು ಕನಸು ಕಾಣುವುದು ವ್ಯರ್ಥ. ಯೋಚನೆ, ಕಲ್ಪನೆಗಳು ಚಿಂತೆ ಆಗುವ ಮೊದಲು ಫಲಪ್ರಾಪ್ತಿ ಆಗಲೇಬೇಕು. ನನ್ನವನು ಬರುವವರೆಗೂ ನಾನು ಕಾದಿರುವುದಕ್ಕಿಂತ ನಾನೇ ಆತನ ಬಳಿಗೆ ತೆರಳಬೇಕು.

ಪ್ರಕೃತಿಯ ವೇಗಕ್ಕೆ ನಾನೂ ಸ್ಪಂದಿಸಬೇಕೆಂದು ಮನೆಯಿಂದ ಹೊರಟೆ. ನನ್ನ ನಿರ್ಧಾರವೇ ನನ್ನ ಚಿಂತೆಗಳನ್ನೆಲ್ಲಾ ದೂರಮಾಡಿತ್ತು. ಹೊಸದಾದ ಉತ್ಸಾಹ, ಧೈರ್ಯ ನನ್ನನ್ನು ಆವರಿಸಿತ್ತು. ಮುಸ್ಸಂಜೆಯಾದ್ದರಿಂದ ಜಾಗರೂಕತೆಗೆ, ಪ್ರಖರವಾದ ಬೆಳಕಿಗೆ ಎಣ್ಣೆದೀಪವನ್ನು ಹಿಡಿದು ನಿಂತೆ. ನನ್ನ ಪ್ರಖರತೆಯ ಕಣ್ಣುಗಳ ಮುಂದೆ ದೀಪ ಮಂದವಾಗಿಯೇ ಇತ್ತು. ದೀಪವೂ ಅನಗತ್ಯವಾಗಿತ್ತು. ಏಕೆಂದರೆ ನಾನಿಟ್ಟ ಹೆಜ್ಜೆಗಳು ಸರಿಯಾಗಿಯೇ ಇರುತ್ತಿದ್ದವು. ನನ್ನ ದೃಷ್ಟಿ ಬಲಿಷ್ಠವಾಗಿತ್ತು. ಸ್ವಲ್ಪ ದಾರಿ ನಡೆಯುತ್ತಿರುವಾಗಲೇ ಗಾಳಿಗೆ ದೀಪ ಆರಿತು. ಮನೆಯಿಂದ ಹೊರಡುವಾಗ ಧೈರ್ಯಕ್ಕೆ ಮಾತ್ರ ದೀಪ ಬೇಕಾಗಿತ್ತು. ಆದರೆ ನನ್ನ ಹೃದಯದಲ್ಲಿನ ಧೈರ್ಯದ ದೀಪಕ್ಕೆ ಕಣ್ಣಿನ ಕಾಂತಿಯ ಎದುರು ಯಾವ ದೀಪ ಎಷ್ಟು ಇರಲಾದೀತು? ಚಿಂತಿಸದೆ ಮುನ್ನಡೆಯುತ್ತಲೇ ಇದ್ದೆ.

ಗೌರವ ಪ್ರದರ್ಶನಕ್ಕೆ ಮುಸುಕು ಬೇರೆ ಕೇಡು. ಅದನು ಸರಿಸಿಕೊಳ್ಳುತ್ತಾ ತ್ವರಿತಲಯದಲ್ಲಿ ನಡೆಯುತ್ತಿದ್ದೆ. ನಿಜ ಹೇಳಬೇಕಿದ್ದರೆ ಬೇರೆಯವರ ದೃಷ್ಟಿಯಲ್ಲಿ ಓಡುವಷ್ಟು ಆತುರದಿಂದ ನಡೆಯುತ್ತಿದ್ದೆ. ಆದರೂ ಮಧ್ಯದಾರಿಯಲ್ಲಿ ತಡೆದು ತಡೆದು ಬೇರೆಯವರ ದೃಷ್ಟಿಯಲ್ಲಿ ಪ್ರಶ್ನೆಗಳ ಸುರಿಮಳೆ. ನಾನೋ ಘಾಟಿ. 'ಇಲ್ಲೇ ದೇವಸ್ಥಾನಕ್ಕೆ ಹೋಗಿ ಬರುವವಳಿದ್ದೆ. ಕತ್ತಲಾಗುತ್ತಲ್ಲ ಅದಕ್ಕೆ ಅವಸರ' ಎಂದೆ. 'ಇವರಿಗೆಲ್ಲಾ ಯಾಕೆ ನನ್ನ ಉಸಾಬರಿ?' ಎಂದು ಮನಸಾ ಶಪಿಸಿದೆ. ಒಂದು ರೀತಿಯ ಧೈರ್ಯದಲ್ಲೇ ಹಜ್ಜೆ ಹಾಕುತ್ತಿರುವುದರಿಂದ ಹೆಚ್ಚಿಗೆ ಪ್ರಶ್ನೆಗಳಿಗೆ ಸಾಹಸ ಮಾಡಲಿಲ್ಲ. ಇವರೆಲ್ಲ ನನ್ನ ಪಾಲಿಗೆ ಅಪಶಕುನಗಳ ಪ್ರಾಣಿಗಳು ಎನ್ನಿಸಿತು. ನನ್ನ ನಡಿಗೆಯ ವೇಗ ಹೆಚ್ಚಿಸಿದೆ.

ನನ್ನ ವೇಗಕ್ಕಿಂತ ಮಳೆಯ ವೇಗ ಹೆಚ್ಚಾಗುತ್ತಿತ್ತು. ರಭಸದಿಂದ ಬಡಿದ ಮಳೆಯಿಂದ ಮೈಯ್ಯೆಲ್ಲಾ ಒದ್ದೆ ಆಯ್ತು. ಬೀಳುತ್ತಿರುವ ಮಳೆಯೊಂದಿಗೆ ಆಟವಾಡುತ್ತಲೇ ನಡೆದು ಆನಂದ ಪಡೆಯುತ್ತಿದೆ. ಆತನ ಸಮಾಗಮದ ಆತುರ, ನಿರೀಕ್ಷೆ, ಕನಸುಗಳಿಂದ ನನ್ನ ಮೈಯ್ಮನಗಳು ಕಾದಿದ್ದವು. ಮಳೆಯಿಂದಲೂ ನನ್ನ ದೇಹವೇನೂ ತಣಿದಿಲ್ಲ; ದಣಿದಿಲ್ಲ. ಆಗಾಗ ನನ್ನ ಸಮರ್ಪಣಾ ಭಾವವನ್ನು ಎಣಿಸಿ ಅಹಂಕಾರ ಪಡುತ್ತಿದ್ದೆ. ಪ್ರೀತಿಗಾಗಿ ನನ್ನ ಆತುರದ ದಾರಿಯನ್ನು ಕಂಡ ನನ್ನವನು ಸೋಲುತ್ತಾನೆ ಎಂಬ ನಂಬಿಕೆ ನನ್ನದು. ಪ್ರೀತಿ ಎನ್ನುವುದು ಹಾಗೇಯೇ ಅಲ್ಲವೇ? ಲೌಕಿಕ ಅಡೆತಡೆಗಳಿಂದ ಪ್ರೀತಿ ಇನ್ನಷ್ಟು ಹರಿತವಾಗುತ್ತದೆಯೇ ವಿನಾ ಕಡಿಮೆ ಆಗಲಾರದು. ಇವೆಲ್ಲಾ ನನ್ನ ಸುತ್ತಮುತ್ತಲಿನ ಗೊಡ್ಡುಮಂದಿಗೆ ಹೇಗೆ ಅರ್ಥವಾದೀತು? ನನ್ನ ವೇಗಕ್ಕೆ ತೊಡಕುಂಟು ಮಾಡುವವರನ್ನು ಪಾಪಿಗಳೆಂದೂ ಬಗೆದ ನನಗೆ ಅವರೆಲ್ಲಾ ಪಾಪದವರೆಂದು ಭಾವಿಸಿ ಉದಾರಿಯಾದೆ. ಗುಡುಗು ಮಿಂಚುಗಳು ನಿಧಾನವಾಗಿ, ನನ್ನ ಎದೆಯ ಗಟ್ಟಿತನಕ್ಕೆ ಗುಡುಗೂ ನಿಂತಿತು. ನನ್ನ ಕಣ್ಣಿನ ಕಾಂತಿಗೆ ಮಿಂಚೂ ನಾಚಿತು. ತೊಟ್ಟಿಕ್ಕುವ ಮಳೆಯ ಹನಿಗಳು ನನ್ನ ನಡೆಗೆ ಲಯವನ್ನು ಒದಗಿಸಿದವು. ಅಂತೂ ಅಬ್ಬರದಿಂದ ಹೊರಟ ನನಗೆ ದಾರಿಯುದ್ದಕ್ಕೂ ಅಬ್ಬರದ ಸ್ವಾಗತಗಳೇ ಇದ್ದವು. ಅಂತೂ ನಾನು ಎಣಿಸಿದ ಸ್ಥಳವನ್ನು ಬಂದು ಮುಟ್ಟಿದೆ.

ನನಗೆ ಮೊದಲೇ ನಲ್ಲ ಬಂದುಬಿಟ್ಟನೋ ಎಂಬ ಆತಂಕದಲ್ಲಿದ್ದ ನನಗೆ ಆ ಸ್ಥಳದಲ್ಲಿ ಆತನಿಲ್ಲದಿರುವುದೂ ಒಂದು ಕ್ಷಣ ಸಮಾಧಾನ ಆಯ್ತು. ಆದರೂ ಆತಂಕದಿಂದ ಎಲ್ಲಾ ದಿಕ್ಕುಗಳಲ್ಲೂ ನೋಡಿದೆ. ಸಾವಧಾನವಾಗಿ ಎತ್ತರದ ಬಂಡೆಯನ್ನು ಏರಿಕುಳಿತು ಯೋಚಿಸಿದೆ. ಆತ ಬರೆದ ಪತ್ರದ ಒಕ್ಕಣಿಕೆಯನ್ನು ನೆನಪಿಸಿಕೊಂಡೆ. ದೂತನಿಂದ ತಿಳಿಸಿದ ಮಾತುಗಳನ್ನು ನೆನಪಿಸಿಕೊಂಡೆ. ಆತ ಬರುವ ಸ್ಥಳ ಇದೇ ಎಂದು ಖಾತರಿಪಡಿಸಿಕೊಂಡೆ. ನನ್ನ ಸ್ಥಳದ ಆಯ್ಕೆ ಗೊಂದಲವಾಗದಿರಲಿ ಎಂದು ಮುಂದುವರೆದು ನದಿಯ ತೀರದ ಸೇತುವೆಯ ಬಳಿ ಬಂದು ನಿಂತೆ. ಇನ್ನೂ ಮುಂದುವರೆದರೆ ಹಲವು ದಾರಿಗಳು. ಗೊಂದಲ ಆದೀತೆಂದು ಅಲ್ಲೇ ಇದ್ದು ಆತನನ್ನು ಸ್ವಾಗತಿಸಲು ಸಿದ್ಧಳಾದೆ. ಆಗಲೇ ಮೋಡಗಳು ಸರಿದು ಸೂರ್ಯನ ಒಂದು ರೀತಿಯ ಕೆಂಪುಕಿರಣಗಳಿಂದ ಪ್ರತಿಫಲನಗೊಂಡ ಆಕಾಶ ಶುಭ್ರತೆಯೊಂದಿಗೆ ಪ್ರಶಾಂತವಾಗಿತ್ತು. ಕತ್ತಲಿನ ಛಾಯೆ ಇದ್ದರೂ ಮುಖಗಳನ್ನು ಗುರುತಿಸುವಷ್ಟು ಬೆಳಕಾಗಿತ್ತು. ನನ್ನ ಧಾವಂತದ ಆಯಾಸ ತಣಿಯುತ್ತಲೇ ಹೃದಯದ ಧಾವಂತ ಹೆಚ್ಚುತ್ತಿತ್ತು...

# ನೃತ್ಯ ನಾಟಕಗಳಾಗಿ ಕನ್ನಡ ಕಾವ್ಯ : ಒಂದು ಅವಲೋಕನ

– ವಿದ್ವಾನ್ ಎ.ಎನ್.ಸುಧೀರ್ ಕುಮಾರ್, ಎಂ.ಎ.

ನೃತ್ಯವನ್ನು ಪ್ರಧಾನವಾಗಿರಿಸಿಕೊಂಡು ಸಂಗೀತ, ನಾಟಕ, ಪರಿಕರಗಳೊಂದಿಗೆ ಒಂದು ಕತೆಯನ್ನು ರಂಗದ ಮೇಲೆ ಪ್ರಯೋಗಿಸುವ ಕಲಾಪ್ರಕಾರವನ್ನು ನೃತ್ಯನಾಟಕವೆಂದು ಕರೆಯಬಹುದು. ಸಂಗೀತವೇ ಪ್ರಧಾನವಾದಾಗ ಅದನ್ನು ಗೀತನಾಟಕ ಅಥವಾ ಗೇಯನಾಟಕವೆಂದು ಕರೆಯುತ್ತಾರೆ. ಪಾಶ್ಚಿಮಾತ್ಯರು ಈ ಗೀತನಾಟಕಗಳನ್ನು ಒಪೇರಾಗಳೆಂದು ಕರೆಯುತ್ತಾರೆ. ಭಾರತದಲ್ಲಿ ಗೀತನಾಟಕಗಳು ಹಾಗೂ ನೃತ್ಯ ನಾಟಕಗಳಲ್ಲಿನ ವ್ಯತ್ಯಾಸ 'ತೀರ ಅಲ್ಪವಾಗಿದ್ದು ಒಂದು ಕಲಾರೂಪ ಇನ್ನೊಂದು ಕಲಾರೂಪಕ್ಕೆ ಸುಲಭವಾಗಿ ಹೊರಳಬಹುದಾಗಿದೆ'*(1). ಭಾರತದಲ್ಲಿ ಗೀತನಾಟಕ ಮತ್ತು ಗೇಯನಾಟಕಗಳು ಒಂದೇ ನಾಣ್ಯದ ಎರಡುಮುಖದಂತೆ ಪ್ರಯೋಗಿಸಲ್ಪಡುತ್ತಿದೆ. 'ಗೇಯನಾಟಕದ ಮೂಲ ಜನಪದ'*(2)ಆಗಿದ್ದು ಇದರ ಪ್ರಾಚೀನತೆಯನ್ನು ಖಚಿತವಾಗಿ ನಿರ್ಧರಿಸುವುದು ಕಷ್ಟ.

ಸುಮಾರು ಕ್ರಿ.ಪೂ. ಎರಡನೇ ಶತಮಾನದಿಂದ ಕ್ರಿ.ಶ. ಆರನೇ ಶತಮಾನದ ಕಾಲಾವಧಿಯಲ್ಲಿ ರಚಿತವಾದ ಭರತನ ನಾಟ್ಯಶಾಸ್ತ್ರದಲ್ಲಿನ ನಾಟ್ಯಸಂಪ್ರದಾಯವು ಗೀತ, ವಾದ್ಯ, ನೃತ್ಯ ಹಾಗೂ ನಾಟಕದ ಅಂಶಗಳನ್ನೊಳಗೊಂಡ ರಂಗಪ್ರಯೋಗವಾಗಿದೆ. ಇದನ್ನು ನೃತ್ಯನಾಟಕವೆಂದೇ ಪರಿಗಣಿಸಬಹುದಾಗಿದ್ದು, ತನ್ಮೂಲಕ ಐತಿಹಾಸಿಕವಾಗಿ ಭಾರತದಲ್ಲಿನ ನೃತ್ಯನಾಟಕದ ಪ್ರಾಚೀನತೆಯನ್ನು ನಿರ್ಧರಿಸ ಬಹುದಾಗಿದೆ. ನಾಟ್ಯಶಾಸ್ತ್ರದ ರಚನೆಯ ಕಾಲಘಟ್ಟಕ್ಕೂ ಮೊದಲೇ ಈ ಕಲಾಪ್ರಕಾರವು ಸಾಕಷ್ಟು ಪ್ರೌಢಿಮೆ ಪಡೆದಿರುವುನ್ನು ಖಚಿತವಾಗಿ ಊಹಿಸಬಹುದಾಗಿದೆ.

'12ನೇ ಶತಮಾನದಲ್ಲಿ ಜಯದೇವ ಕವಿಯಿಂದ ರಚನೆಗೊಂಡ **"ಗೀತಗೋವಿಂದ"** ಐತಿಹಾಸಿಕವಾಗಿ ಭಾರತದ ಮೊಟ್ಟಮೊದಲ ಗೀತನಾಟಕವೆಂದು ಗುರುತಿಸಲ್ಪಟ್ಟಿದೆ.*(3)

'17ನೇ ಶತಮಾನದ ತೀರ್ಥನಾರಾಯಣರಿಂದ ರಚಿತವಾದ "ಕೃಷ್ಣಲೀಲಾತರಂಗಿಣಿ", ಸ್ವಾತಿತಿರುನಾಳ್ ಮಹಾರಾಜರಿಂದ ರಚಿತವಾದ ಕುಚೇಲೋಪಾಖ್ಯಾನ, ಅಜಮಿಳೋಪಾಖ್ಯಾನ, 18ನೇ ಶತಮಾನದ ಶ್ರೀ ತ್ಯಾಗರಾಜರ ಪ್ರಹ್ಲಾದ ಭಕ್ತಿವಿಜಯಂ, ನೌಕಾಚರಿತ್ರಂ, ಸುಮಾರು ಅದೇಕಾಲಕ್ಕೆ ಸೇರಿದ ಗೋಪಾಲ ಕೃಷ್ಣ ಭಾರತಿಯಾರ್‌ರವರ ನಂದನಾರ್ ಚರಿತ್ರಂ, ಅರುಣಾಚಲ ಕವಿಯ ರಾಮನಾಟಕಂ'*(4) ಸೇರಿದಂತೆ ದೇಶದಾದ್ಯಂತ ಗೀತನಾಟಕಗಳ ರಚನೆಗಳು ಹಾಗೂ ಪ್ರಯೋಗಗಳು ನಡೆದುಬಂದಿವೆ.

ಕಥಕಳಿ, ಮಣಿಪುರಿ, ಕೂಚಿಪುಡಿ, ಭಾಗವತಮೇಳ, ಕೊರವಂಜಿ ಸೇರಿದಂತೆ ಅನಾದಿಕಾಲದಿಂದಲೂ ನಮ್ಮ ದೇಶದಲ್ಲಿ ನೃತ್ಯ ನಾಟಕಗಳು ಪ್ರಮುಖ ಪ್ರದರ್ಶನ ಕಲೆಯಾಗಿ ಬೆಳೆದು ಬಂದಿದೆ. ಕರ್ನಾಟಕದ

---

* ಕನ್ನಡ ಗೀತನಾಟಕಗಳ ಅಧ್ಯಯನ. *1.ಒಂದನೇ ಅಧ್ಯಾಯ. *3 ಪುಟ-67. *4 ಪುಟ-38

* ನೃತ್ಯಕಲೆ. *ಪುಟ-425

'ಯಕ್ಷಗಾನವನ್ನು ಗೀತನಾಟಕವೆಂದು ಖ್ಯಾತವಿದ್ವಾಂಸರಾದ ಕು.ಶಿ.ಹರಿದಾಸಭಟ್ಟರು'*(5) ಅಭಿಪ್ರಾಯ ಪಟ್ಟಿದ್ದಾರೆ. ಕ್ರಿ. ಶ. 1673–1704ರ ಅವಧಿಯಲ್ಲಿ ಮೈಸೂರಿನ **'ಚಿಕ್ಕದೇವರಾಜ ಒಡೆಯ**ರಿಂದ ರಚಿತವಾದ **"ಗೀತಗೋಪಾಲ"** ಕನ್ನಡದ ಮೊತ್ತಮೊದಲನೆಯ ಗೀತನಾಟಕ'*(6)ವೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

**ಆಧುನಿಕ ಕನ್ನಡ ಕಾವ್ಯ :** ಪ್ರಾಚೀನ ಕನ್ನಡ ಕಾವ್ಯವು ಸುಮಾರು ಒಂದು ಸಾವಿರ ವರುಷಕ್ಕೂ ಹೆಚ್ಚಿನ ಇತಿಹಾಸವನ್ನು ಹೊಂದಿದೆ. ಕ್ರಿ.ಶ. 1850 ರಿಂದ ಸುಮಾರು ಒಂದು ಶತಮಾನಗಳ ಕಲಾವಧಿಯಲ್ಲಿ ರಮ್ಯ ಸಂಪ್ರದಾಯ ಹಾಗೂ ವಾಸ್ತವವಾದಗಳು ರೂಪುಗೊಂಡವು. ಅದಕ್ಕೂ ಮೊದಲು ರೂಢಿಯಲ್ಲಿದ್ದ ಹಳೆಯ ಸಂಪ್ರದಾಯಗಳ ಬಂಧನವನ್ನು ಕಳಚಿ ಹೊಸಕಾವ್ಯ ಯುಗವೊಂದು ಉದಯಿಸುವ ಮೂಲಕ ಆಧುನಿಕ ಕನ್ನಡ ಕಾವ್ಯವೆಂದು ಗುರುತಿಸಲ್ಪಟ್ಟಿತು. ಆಧುನಿಕ ಕನ್ನಡಕಾವ್ಯ ಸ್ವರೂಪವು ರೂಪುಗೊಳ್ಳುವಲ್ಲಿ ಮುಖ್ಯವಾಗಿ ಎರಡು ಪ್ರಮುಖ ಅಂಶಗಳು ಕಾರಣವೆನ್ನಲಾಗಿದೆ.

1. ಇಂಗ್ಲೀಷ್ ವಿದ್ಯಾಭ್ಯಾಸದ ಮೂಲಕ ಉಂಟಾದ ಪಾಶ್ಚಿಮಾತ್ಯ ಪ್ರಭಾವ.
2. ಸ್ವಾತಂತ್ರ್ಯ ಹೋರಾಟದ ಮೂಲಕ ಉಂಟಾದ ರಾಷ್ಟ್ರೀಯತೆಯ ಪ್ರಜ್ಞೆ.

ಇದರೊಂದಿಗೆ ಹೊರಜಗತ್ತಿನ ವಿಜ್ಞಾನ–ಯಂತ್ರನಾಗರೀಕತೆಯ ಆಕರ್ಷಣೆ, ಇಂಥಹ ಸ್ಥಿತಿಯಲ್ಲಿ 19ನೇ ಶತಮಾನದ ಬ್ರಿಟೀಷ್ ರಮ್ಯ ಸಂಪ್ರದಾಯ ಸೂಕ್ತ ಮನೋಭೂಮಿಕೆಯನ್ನು ನಿರ್ಮಿಸುವ ಸಾಧನವಾಗಿ ಒದಗಿಬಂದಿತು.

ಬಿ.ಎಂ.ಶ್ರೀಯವರ ಇಂಗ್ಲೀಷ್ ಗೀತೆಗಳು ಆಧುನಿಕ ಕನ್ನಡ ಕಾವ್ಯದ ಪ್ರಮುಖ ಚಾರಿತ್ರಿಕ ಘಟ್ಟಗಳಲ್ಲೊಂದು. 1921ರಲ್ಲಿ ಪ್ರಕಟವಾದ 63 ಕವನಗಳನ್ನೊಳಗೊಂಡ ಈ ಕವನಸಂಗ್ರಹದೊಂದಿಗೆ **"ಕನ್ನಡದ ನವೋದಯ"** ವಾಯಿತು. ಈ ಸಂಗ್ರಹದಲ್ಲಿ ಶೆಲ್ಲಿ, ವರ್ಡ್ಸ್‌ವರ್ತ್, ಷೇಕ್ಸ್‌ಪಿಯರ್ ಮೊದಲಾದ ಪಾಶ್ಚಿಮಾತ್ಯ ಶ್ರೇಷ್ಠಕವಿಗಳ ಕವನಗಳನ್ನು ಆಯ್ದುಕೊಂಡು ಬಿ.ಎಂ.ಶ್ರೀಯವರು ಅನುವಾದಿಸಿದ್ದಾರೆ. (ಇದನ್ನು ಅನುಸೃಷ್ಠಿ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.)*(7) ನಂತರ ಇವರೊಂದಿಗೆ ಎಂ. ಗೋವಿಂದ ಪೈ, ಪಂಜೆ ಮಂಗೇಶರಾಯರು, ಡಿ.ವಿ.ಜಿ., ಪು.ತಿ.ನ., ಮಾಸ್ತಿ, ಕುವೆಂಪು, ಬೇಂದ್ರೆ, ಕೆ. ಎಸ್. ನರಸಿಂಹ ಸ್ವಾಮಿ ಮೊದಲಾದವರು ಈ ನವೋದಯದ ಪ್ರಮುಖ ಕವಿಗಳೆಂದು ಗುರುತಿಸಲ್ಪಟ್ಟಿದ್ದಾರೆ.

**ನವ್ಯ ಕಾವ್ಯ :** ನವೋದಯದಂತೆ ನವ್ಯಕಾವ್ಯವೂ ಇಂಗ್ಲೀಷ್‌ನ "ಮಾಡರ್ನ್‌ಪೊಯಟ್ರಿ"ಗೆ ಸಂವಾದಿಯಾಗಿ ಇಂಗ್ಲೀಷ್ ಕಾವ್ಯದ ಪ್ರೇರಣೆಯಿಂದಲೇ ಜನಿಸಿದ ಇನ್ನೊಂದು ಪ್ರಕಾರ. ಎರಡನೇ ಮಹಾಯುದ್ದದ ನಂತರ ಮುಂದೆ ಯುದ್ಧಗಳಾಗದಂತೆ ಮಾನವ ಸಂಬಂಧಗಳು ಕಲುಷಿತವಾಗದಂತೆ ಕಾಪಾಡುವ ವಿಚಾರಗಳು ಮುಖ್ಯವಾದ ಹಿನ್ನೆಲೆಯಲ್ಲಿ ರೂಪುಗೊಂಡಿತು. 'ನವ್ಯಕಾವ್ಯವನ್ನು ಬಿತ್ತಿ ಬೆಳೆದವರು ವಿ.ಕೃ.ಗೋಕಾಕ್ ಹಾಗೂ ಎಂ. ಗೋಪಾಲಕೃಷ್ಣ ಅಡಿಗರು.' *(8) ನವ್ಯ ಕಾವ್ಯದ ಇತರ ಪ್ರಮುಖರೆಂದರೆ ಗಂಗಾಧರ ಚಿತ್ತಾಲ, ಶಂಕರ ಮೋಕಾಶಿ ಸು.ರಂ.ಎಕ್ಕುಂಡಿ ಮೊದಲಾದವರು.

---

* **ಕನ್ನಡ ಗೀತನಾಟಕಗಳ ಅಧ್ಯಯನ. *5 ಒಂದನೇ ಅಧ್ಯಾಯ *6 ಮೂರನೇ ಅಧ್ಯಾಯ**
* **ಕನ್ನಡ ಸಾಹಿತ್ಯಚರಿತ್ರೆ *7.ಪುಟ–319**

**ಬಂಡಾಯ ಕಾವ್ಯ :** ಲೇಖನಿಯನ್ನು ಖಡ್ಗವನ್ನಾಗಿಸುವ ಪ್ರಣಾಲಿಕೆಯನ್ನು ಮುಂದಿಟ್ಟುಕೊಂಡು ದಲಿತ ಕವಿ ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು', 'ಸಾವಿರಾರು ನದಿಗಳು' ಕವನ ಸಂಕಲನದೊಂದಿಗೆ ತನ್ನ ವಿಶೇಷತೆಯನ್ನು ಪ್ರಕಟಿಸಿತು. ಬುದ್ಧಣ್ಣ ಹಿಂಗಮೀರೆ, ಚಂದ್ರಶೇಖರ ಪಾಟೀಲ, ಬರಗೂರು ರಾಮಚಂದ್ರಪ್ಪ, ಕೆ.ಬಿ.ಸಿದ್ಧಯ್ಯ, ಕಾಳೇಗೌಡ ನಾಗವಾರ, ರಂಜಾನ್ ದರ್ಗಾ, ಕೆ.ಎಂ. ಮುನಿಕೃಷ್ಣಪ್ಪ ಈ ಮೊದಲಾದವರು ಬಂಡಾಯ ಕಾವ್ಯದ ಇತರ ಪ್ರಮುಖರು. ಪ್ರಾಚೀನ ಕನ್ನಡ ಕಾವ್ಯದಿಂದ ಇಂದಿನವರೆಗೂ ವಿವಿಧ ಕಾವ್ಯಪ್ರಕಾರಗಳ ಅನೇಕ ಜೀವಂತ ವಾಹಿನಿಗಳು ನಿರಂತರವಾಗಿ ಪ್ರವಹಿಸುತ್ತಿವೆ.*(9)

**ಆಧುನಿಕ ನೃತ್ಯನಾಟಕ :** ಪದ್ಮಶ್ರೀ ಉದಯಶಂಕರ್ (1900–1977) ರವರನ್ನು ಆಧುನಿಕ ನೃತ್ಯನಾಟಕದ ಪ್ರವರ್ಧಕರೆಂದು ಹೇಳಬಹುದು. ಚಿತ್ರಕಲಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ತೆರಳಿ "ಕಾಲೇಜ್ ಆಫ್ ಫೈನ್ ಆರ್ಟ್ಸ್"ನಲ್ಲಿ ಅಧ್ಯಯನವನ್ನು ಮಾಡುವಾಗ ಅಧ್ಯಾಪಕ ವಿಲಿಯಂ ರೂಥೆನ್‌ಸ್ಟೈನ್‌ರವರ ಸಲಹೆಯಂತೆ ಪಾಶ್ಚಿಮಾತ್ಯ ಕಲಾಪ್ರಕಾರಕ್ಕೆ ಮಾರುಹೋಗದೆ ಭಾರತೀಯ ಪ್ರಾಚೀನ ಪರಂಪರೆಯ ಅಧ್ಯಯನವನ್ನು ಮಾಡಿದರಲ್ಲದೆ ರಷ್ಯಾದ ನೃತ್ಯತಾರೆ ಅನ್ನಾ ಪಾವಲೋವರವರ ಭೇಟಿಯಿಂದಾಗಿ ನೃತ್ಯಕಲೋಪಾಸಕರಾದರು. ನಂತರ ಭಾರತದ ಹಲವು ಶಾಸ್ತ್ರೀಯ ಮತ್ತು ಜಾನಪದ ನೃತ್ಯಗಳನ್ನು ಅಧ್ಯಯನ ಮಾಡಿ, ಸುಸಜ್ಜಿತವಾದ ಉತ್ತಮ ಕಲಾತಂಡದೊಂದಿಗೆ ಹಲವಾರು ನೃತ್ಯ ನಾಟಕಗಳನ್ನು ಸಂಯೋಜಿಸಿ, , ನೃತ್ಯನಾಟಕದಲ್ಲಿ ಹೊಸ ಸಂಶೋಧನೆಯನ್ನು, ಹಲವಾರು ಹೊಸ ಪ್ರಯೋಗಗಳನ್ನು ಮಾಡಿ, ಹಿಮಾಲಯದ ತಪ್ಪಲಿನಲ್ಲಿ 'ಆಲ್ಮೊರ' ಎಂಬಲ್ಲಿ ಅತ್ಯಾಧುನಿಕವಾದ ಒಂದು ಕಲಾತರಬೇತಿ ಸಂಸ್ಥೆಯನ್ನು ಸ್ಥಾಪಿಸಿ*(10) ದೇಶದ ನೃತ್ಯನಾಟಕದ ಇತಿಹಾಸದಲ್ಲಿ ಒಂದು ಕ್ರಾಂತಿಯನ್ನೇ ಮಾಡಿದರು. ಸುಮಾರು ಒಂದು ಶತಮಾನದ ಹಿಂದೆಯೇ ಭಾರತದ ನೃತ್ಯನಾಟಕಗಳಿಗೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟು ವಿದೇಶಗಳಲ್ಲಿಯೂ ಭಾರತದ ನೃತ್ಯನಾಟಕದ ಸೊಬಗನ್ನು ಜನಪ್ರಿಯಗೊಳಿಸಿದರಲ್ಲದೆ ವಿಶ್ವಮಾನ್ಯತೆಯನ್ನು ಗಳಿಸಿಕೊಟ್ಟರು. ಆದರೂ ಇಂದಿನ ಆಧುನಿಕ ಯುಗದ ದೇಶದಲ್ಲಿ ನೃತ್ಯನಾಟಕದ ಮಟ್ಟ ತೀರ ಕುಸಿಯುತ್ತಿರುವುದು ಶೋಚನೀಯ.

ಉದಯಶಂಕರ್‌ರವರ ನಂತರ ಅವರ ಶಿಷ್ಯರಾದ ಸಚಿನ್‌ಶಂಕರ್, ಶಾಂತಿಬರ್ಧನ್, ಪ್ರಭಾತ್ ಗಂಗೂಲಿ ಯವರು ಸಾಕಷ್ಟು ಸೇವೆಯನ್ನು ಸಲ್ಲಿಸಿದ್ದಾರೆ. ಗುರುಗೋಪಿನಾಥ್, ರುಕ್ಮಿಣಿದೇವಿ ಅರುಂಡೇಲ್, ಮೃಣಾಲಿನಿ ಸಾರಾಬಾಯಿ ಮೊದಲಾದವರು ನೃತ್ಯನಾಟಕ ಕ್ಷೇತ್ರದಲ್ಲಿ ಸಾಕಷ್ಟು ಉತ್ತಮ ಪ್ರಯೋಗಗಳನ್ನು ಮಾಡಿದ್ದಾರೆ.

**ಕರ್ನಾಟಕದಲ್ಲಿ ನೃತ್ಯನಾಟಕಗಳು :** ಯಕ್ಷಗಾನವನ್ನು ಹೊರತುಪಡಿಸಿ ನೋಡಿದರೆ ನೃತ್ಯನಾಟಕ ಕ್ಷೇತ್ರದಲ್ಲಿ ಕರ್ನಾಟಕದ ಕೊಡುಗೆ ತೀರ ಅಲ್ಪಪ್ರಮಾಣವೆನ್ನಬಹುದು. ಪ್ರಭಾತ್ ಕಲಾವಿದರು, ಅರುಣ್ ಕಲಾವಿದರು, ಡಾ॥ಮಾಯಾರಾವ್‌ರವರ ಕಥಕ್ ಮತ್ತು ಕೋರಿಯೋಗ್ರಫಿ ಸಂಸ್ಥೆಯು ಸ್ವಲ್ಪಮಟ್ಟಿಗೆ ನುರಿತ ಕಲಾವಿದರನ್ನು ಕಲೆಹಾಕಿ ಒಂದು ಕಲಾತಂಡದ ಮೂಲಕ ಹಲವಾರು ಯಶಸ್ವಿ ಪ್ರಯೋಗಗಳನ್ನು ಮಾಡಿದ್ದಾರೆ.

ದಿ॥ ಎಚ್.ಆರ್. ಕೇಶವಮೂರ್ತಿಯವರು ಹಳೆಗನ್ನಡ ಕಾವ್ಯ ಮತ್ತು ಆಧುನಿಕ ಕನ್ನಡ ಕಾವ್ಯಸೇರಿದಂತೆ ಸುಮಾರು ಐವತ್ತಕ್ಕೂ ಹೆಚ್ಚಿನ ನೃತ್ಯನಾಟಕವನ್ನು ಪ್ರಯೋಗಿಸಿರುವುದು ಒಂದು ದಾಖಲೆ ಎಂದೇ ಹೇಳಬಹುದಾಗಿದೆ.

---

* **ಕನ್ನಡ ಸಾಹಿತ್ಯಚರಿತ್ರೆ** *8. **ಪುಟ**–327 *9. **ಪುಟ–334**
* **ಪ್ರದರ್ಶನ ಕಲೆಗಳು** ***10. ಪುಟ–9**

ದಿ॥ ಪದ್ಮಿನಿರಾವ್, ಬಿ.ಕೆ.ಶ್ಯಾಂಪ್ರಕಾಶ್, ಲಲಿತಾಶ್ರೀನಿವಾಸನ್, ರಾಧಾಶ್ರೀಧರ್, ವೈಜಯಂತಿಕಾಶಿ, ಪದ್ಮಿನಿ ರಾಮಚಂದ್ರನ್, ಬಿ.ಕೆ.ವಸಂತಲಕ್ಷ್ಮಿ, ಕಲಾಮಂಡಲಂ ಉಷಾದಾತಾರ್, ಡಾ॥ ತುಳಸಿರಾಮಚಂದ್ರ, ಡಾ॥ಶೀಲಾಶ್ರೀಧರ್, ಡಾ॥ವಸುಂಧರಾ ದೊರೈಸ್ವಾಮಿ ಮೊದಲಾದವರು ಸೇರಿದಂತೆ ಇನ್ನೂ ಹಲವಾರು ಕಲಾವಿದರು ತಮ್ಮ ವಿದ್ಯಾರ್ಥಿ ಗಳಿಂದಲೂ ಹಾಗೂ ಇತರೆ ಕಲಾತಂಡಗಳಿಂದಲೂ ಆಧುನಿಕ ಕನ್ನಡಕಾವ್ಯವನ್ನು ಬಳಸಿಕೊಂಡು ನೃತ್ಯನಾಟಕವನ್ನು ಪ್ರದರ್ಶಿಸಿರುವ ಸಾಕಷ್ಟು ಉದಾಹರಣೆಗಳಿವೆ.

ಈ ಎಲ್ಲಾ ನೃತ್ಯಗುರುಗಳು ತಮ್ಮ ನೃತ್ಯಶಾಲಾ ವಿದ್ಯಾರ್ಥಿಗಳನ್ನೇ ಅವಲಂಬಿಸಬೇಕಾದ ಅನಿವಾರ್ಯತೆ ಯಿದೆ. ಹಲವು ನೃತ್ಯನಾಟಕಗಳು ತಮ್ಮ ನೃತ್ಯಶಾಲಾ ವಾರ್ಷಿಕೋತ್ಸವಕ್ಕೇ ಸೀಮಿತವಾಗಿ, ಬಹಳಷ್ಟು ಪ್ರಯೋಗಗಳಿಗೆ ಪ್ರಥಮ ಪ್ರದರ್ಶನವೇ ಕೊನೆಯ ಪ್ರದರ್ಶನವಾದ ಉದಾಹರಣೆಗಳಿವೆ.

ಬೆರಳೆಣಿಕೆಯಷ್ಟು ಮಾತ್ರ ಆಧುನಿಕ ಕನ್ನಡ ಕಾವ್ಯವನ್ನು ಬಳಸಿಕೊಳ್ಳಲಾಗಿದೆ.

ಉದಾ:-**ಕುರ್ತುಕೋಟಿಯವರ '**ಸ್ವಪ್ನದರ್ಶಿ**'**

**ಪು.ತಿ.ನ :** ಗೋಕುಲ ನಿರ್ಗಮನ, ಶ್ರೀರಾಮ ಪಟ್ಟಾಭಿಷೇಕ, ಶ್ರೀಕೃಷ್ಣ ಕುಚೇಲ

**ಶಿವರಾಮ ಕಾರಂತ :** ಮುಕ್ತದ್ವಾರ, ಬುದ್ಧೋದಯ, ಲವಕುಶ, ಕೀಚಕ ಸೈರಂಧ್ರಿ, ಸೋಮಿಯ ಸೌಭಾಗ್ಯ, ಯಾರೋ ಅಂದರು

**ಕುವೆಂಪು:** ಶ್ರೀರಾಮಾಯಣದರ್ಶನ, ಚಿತ್ರಾಂಗದ, ಕರಿಸಿದ್ಧ, ನನ್ನಗೋಪಾಲ, ಬೊಮ್ಮನಹಳ್ಳಿಯ ಕಿಂದರಜೋಗಿ

**ಸಾ.ಶಿ.ಮರುಳಯ್ಯ :** ಅಂಬೆ, ಬನವಾಸಿ, ಬಾದಾಮಿ, ಸ್ನೋವೈಟ್, ಚೆನ್ನಿ ಚೆನ್ನಿ ಚೆನ್ನಲೆ, ಶಿವ ಛತ್ರಪತಿ, ಉಲ್ಲಾಳದ ರಾಣಿ

**ಮಾಸ್ತಿಯವರ** ಗೌಡರಮಲ್ಲಿ

**ಎ.ಎನ್.ಸುಬ್ಬರಾವ್** ರವರ **"ಶಾಂತಿಸಂದೇಶ"**

ಇನ್ನೂ ಯತೇಚ್ಛವಾಗಿ ಬಳಸಬಹುದಾದ, ಸಾಕಷ್ಟು ವೈವಿಧ್ಯಮಯವಾದ, ಅಮೂಲ್ಯ ಸಾಹಿತ್ಯವನ್ನು ಹೊಂದಿರುವ ಆಧುನಿಕ ಕನ್ನಡ ಕಾವ್ಯಗಳು, ಗೀತನಾಟಕಗಳು, ನೃತ್ಯರೂಪಕಗಳು, ಕಥನಕವನಗಳು ಲಭ್ಯವಿದ್ದು ಆ ಸಾಹಿತ್ಯದ ಬಗೆಗೆ ನೃತ್ಯಗುರುಗಳಿಗೆ ಮತ್ತು ಕಲಾವಿದರಿಗೆ ಸಾಷ್ಟು ಅರಿವನ್ನು ಮೂಡಿಸುವ ಪ್ರಯತ್ನಗಳು ನಡೆಯಬೇಕಾಗಿದೆ.

ಅನುಭವಿ ಕಲಾವಿದರ ಕೊರತೆಯಿಂದಾಗಿ (ಕೆಲವೊಮ್ಮೆ ನುರಿತ ಅನುಭವಿ ಕಲಾವಿದರನ್ನು ಅತಿಥಿ ಕಲಾವಿದರನ್ನಾಗಿ ಕೆಲವು ಮುಖ್ಯಪಾತ್ರಗಳಿಗೆ ಬಳಸಿಕೊಂಡಿರುವ ಉದಾಹರಣೆಗಳು ಸಾಕಷ್ಟಿವೆ.) ಬಹಳಷ್ಟು ಕಲಾವಿದರು ಯಾವುದಾದರೂ ಒಂದು ಶಾಸ್ತ್ರೀಯ ನೃತ್ಯದ ಮಾರ್ಗಪದ್ಧತಿಯಲ್ಲಿ ಪರಿಣತರಾಗಿದ್ದರೂ, ನೃತ್ಯನಾಟಕದಲ್ಲಿ ಅಭಿನಯಿಸುವಾಗ ಪಾತ್ರಪೋಷಣೆಗೆ ಬೇಕಾದ ತರಬೇತಿಯ ಕೊರತೆ ಎದ್ದುಕಾಣುತ್ತಿದೆ. ಡಾ॥ಮಾಯಾರಾವ್‌ರವರ ಕಥಕ್ ಮತ್ತು ಕೋರಿಯೋಗ್ರಫಿ ಸಂಸ್ಥೆಯನ್ನು ಹೊರತುಪಡಿಸಿದರೆ ನೃತ್ಯ ನಾಟಕಗಳಿಗಾಗಿ ತರಬೇತಿ ನೀಡುವ ಸಂಸ್ಥೆಗಳ ಕೊರತೆಯಿದೆ; ಪರಿಣತ ಕಲಾವಿದರ ಕೊರತೆಯಿದೆ. ಸುಸಜ್ಜಿತವಾದ ಕಲಾತಂಡಗಳ ಅಗತ್ಯವಿದೆ, ಸೃಜನಶೀಲ ನೃತ್ಯನಾಟಕ ನಿರ್ದೇಶಕರು ಮತ್ತು ನೃತ್ಯನಾಟಕಗಳಿಗೆ ಸೃಜನಶೀಲ ನೃತ್ಯಸಂಯೋಜಕರ ಅಗತ್ಯವಿದೆ.

ಒಂದೊಂದು ನೃತ್ಯನಾಟಕಗಳಿಗೂ ಅಗತ್ಯವಾಗಿ ಬೇಕಾದ ಹಿನ್ನೆಲೆ ಸಂಗೀತ, ಹಾಡುಗಾರಿಕೆ, ವಿವಿಧ ಸಂಗೀತವಾದ್ಯಗಳು, ವೇಷಭೂಷಣಗಳು, ಬೆಳಕಿನ ಸಂಯೋಜನೆ, ರಂಗವಿನ್ಯಾಸ (ಸ್ಟುಡಿಯೋ ರೆಕಾರ್ಡಿಂಗ್ ಸಂಗೀತದ ಬಳಸಿಕೊಂಡರೂ) ತಗಲುವ ಆರ್ಥಿಕ ಸಮಸ್ಯೆ, ಮರುಪ್ರದರ್ಶನ ಅವಕಾಶ ದೊರೆಯುವ ಭರವಸೆಗಳು ಇಲ್ಲದೆ ಕರ್ನಾಟಕದಲ್ಲಿ ನೃತ್ಯನಾಟಕಗಳು ಹೆಚ್ಚಿನ ಪ್ರಗತಿಯನ್ನು ಸಾಧಿಸಿಲ್ಲವೆಂದೇ ಹೇಳಬಹುದು.

ಬಹಳಷ್ಟು ಕಲಾವಿದರು ಹವ್ಯಾಸಕ್ಕಾಗಿ ಶಾಸ್ತ್ರೀಯ ನೃತ್ಯವನ್ನು ಕಲಿಯುತ್ತಿದ್ದರೆ, ಇನ್ನು ಹಲವರು ಏಕವ್ಯಕ್ತಿ ಪ್ರದರ್ಶನದ ದೃಷ್ಟಿಯಲ್ಲಿ ಕಲಿಯುತ್ತಾರೆ. ಅದರಲ್ಲಿ ಕೆಲವರು ನೃತ್ಯ ತರಗತಿಯನ್ನು ತೆರೆದು ಸ್ವಯಂ ಉದ್ಯೋವನ್ನಾಗಿಸಿಕೊಳ್ಳುತ್ತಾರೆ. ಸರ್ಕಾರ ನಡೆಸುವ ಉತ್ಸವಗಳಲ್ಲಿ, ಸಾಕಷ್ಟು ಮುಂಚಿತವಾಗಿ ಕಾರ್ಯಕ್ರಮದ ದಿನಾಂಕಗಳು ನಿರ್ಧರಿಸಲ್ಪಡದೆ ಇರುವುದರಿಂದ ಅತ್ಯಗತ್ಯವಾದ ಪೂರ್ವಸಿದ್ಧತೆಯ ಕೊರತೆಯಿಂದಾಗಿ ಪ್ರದರ್ಶನದ ಗುಣಮಟ್ಟಗಳು ಕುಸಿಯುತ್ತಿವೆ. ಕೆಲವೊಂದು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅಪರೂಪಕ್ಕೆ ಅವಕಾಶಗಳು ದೊರೆತರೂ ಒಟ್ಟಿನಲ್ಲಿ ನೃತ್ಯನಾಟಕದ ಆರ್ಥಿಕ ಹೊರೆಯನ್ನು ನಿಭಾಯಿಸುವುದು ಬಹಳ ಕಷ್ಟಕರವಾಗಿದೆ.

ಪ್ರತಿ ವರುಷವೂ ರಾಜ್ಯಾದಾದ್ಯಂತ ಸಾಕಷ್ಟು ಸಂಗೀತ, ನೃತ್ಯ, ನಾಟಕ, ಸ್ಪರ್ಧೆಗಳನ್ನು ಹಲವಾರು ಸಂಘ–ಸಂಸ್ಥೆಗಳು ಏರ್ಪಡಿಸುತ್ತಿರುವುದು ಸ್ವಾಗತಾರ್ಹವಾಗಿದೆ. ಅಂತೆಯೇ ನೃತ್ಯನಾಟಕಗಳಿಗೂ ಪ್ರೋತ್ಸಾಹದ ಅಗತ್ಯವಿದೆ. ತನ್ಮೂಲಕ ಹೊಸ ಹೊಸ ಪ್ರಯೋಗಗಳಿಗೆ ವೇದಿಕೆಯನ್ನು ಒದಗಿಸಿದಂತಾಗುತ್ತದೆ.

"ಪಾಶ್ಚಿಮಾತ್ಯ ಒಪೇರಾಗಳಿಗೆ ಇರುವ ನೂರಾರು ವರುಷಗಳ ಇತಿಹಾಸದಲ್ಲಿ ಅವುಗಳಿಗೆ ದೊರೆತ ಪುರಸ್ಕಾರ, ಪ್ರಯೋಗಾವಕಾಶ; ತನ್ಮೂಲಕ ಅದೊಂದು ರಾಷ್ಟ್ರಮಟ್ಟದ ಕಲೆಯಾಗಿ ಪರಿಪೂರ್ಣ ವಿಕಾಸ ಹೊಂದಿರುವುದನ್ನು ಕಾಣಬಹುದು. ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಈ ಕಲೆಯನ್ನು ಉಳಿಸಿ ಉದ್ದರಿಸಿ, ಮತ್ತಷ್ಟು ವಿಜೃಂಭಿಸುವಂತೆ ಮಾಡಲು ನಡೆಯುತ್ತಿರುವ ಪ್ರಯತ್ನಗಳು ಸಂಶೋಧನೆ, ಹೊಸಕೃತಿಗಳ ಸೃಷ್ಠಿಗೆ ನೀಡುತ್ತಿರುವ ಪ್ರೋತ್ಸಾಹಗಳನ್ನು ಗಮನಿಸಿದರೆ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ನೃತ್ಯನಾಟಕದ ಪ್ರಗತಿ ತುಂಬಾ ನಿರಾಶಾದಾಯಕವಾಗಿದೆ."*(11)

ನಮ್ಮ ದೇಶದಲ್ಲಿ ವಿಶ್ವಮನ್ನಣೆಯನ್ನು ಗಳಿಸಿರುವ ಏಳು ಶಾಸ್ತ್ರೀಯ ನೃತ್ಯ ಪ್ರಕಾರಗಳಿವೆ, ನೂರಾರು ಜಾನಪದ ನೃತ್ಯಗಳಿವೆ. ವೈವಿಧ್ಯಮಯವಾದ ಶ್ರೀಮಂತ ಸಂಗೀತವಿದೆ. ಹಲವು ಬಗೆಯ ಅತ್ಯಾಕರ್ಶಕ ಆಹಾರ್ಯವಿದೆ. ಸಾವಿರಾರು ಬಗೆಯ ಕಥೆಗಳಿವೆ. (ವಿಶ್ವದಲ್ಲಿ ಭಾರತವನ್ನು ಕಥೆಗಳ ತವರೂರು ಎಂದೇ ಕರೆಯುತ್ತಾರೆ.) ವಿಶ್ವದ ಬೇರಾವ ರಾಷ್ಟ್ರಕ್ಕೂ ಇರದ ಈ ಕಲಾಶ್ರೀಮಂತಿಕೆಯನ್ನು ನೃತ್ಯನಾಟಕಗಳಿಗೆ ಸಮರ್ಪಕವಾಗಿ ಬಳಸಿ ಪ್ರದರ್ಶಿಸಿದಲ್ಲಿ ಇದು ವಿಶ್ವದಾದ್ಯಂತ ಮನ್ನಣೆಯನ್ನು ಗಳಿಸುವುದರಲ್ಲಿ ಸಂಶಯವಿಲ್ಲ.

ಆಧುನಿಕ ಕನ್ನಡದ ಕಾವ್ಯ ವಿಷಯಸರಳತೆಯಿಂದಾಗಿ ಶ್ರೀಸಾಮಾನ್ಯನನ್ನು ಸುಲಭವಾಗಿ ತಲುಪುವುದರಿಂದ ಇದರ ಹೆಚ್ಚು ಬಳಕೆಗೆ ಒತ್ತು ನೀಡುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂಗೀತ ನೃತ್ಯ ಅಕಾಡೆಮಿ, ಸಾಹಿತ್ಯ ಅಕಾಡೆಮಿ, ನೃತ್ಯ ಕಲಾ ಪರಿಷತ್ತು, ಸಾಹಿತ್ಯ ಪರಿಷತ್ತು, ಕನ್ನಡಪರ ಸಂಘ–ಸಂಸ್ಥೆಗಳು ಹೆಚ್ಚಿನ ಆಸಕ್ತಿಯನ್ನು ತಳೆಯುವುದು ಮುಖ್ಯ. ತನ್ಮೂಲಕ ಕನ್ನಡದ ನೃತ್ಯ ನಾಟಕಗಳು ರಾಷ್ಟ್ರ ಮತ್ತು ಅಂತರಾಷ್ಟ್ರ ಮಟ್ಟದಲ್ಲಿ ವಿಜೃಂಭಿಸುವಂತಾಗಬೇಕು.

---

* **ಕನ್ನಡ ಗೀತನಾಟಕಗಳ ಅಧ್ಯಯನ** :*11. 6ನೇ ಅಧ್ಯಾಯ

## ಗ್ರಂಥ ಋಣ


- **ನೃತ್ಯಕಲೆ** : ಪ್ರೊ||ಯು.ಎಸ್.ಕೃಷ್ಣರಾವ್ ಮತ್ತು ಚಂದ್ರಭಾಗಾದೇವಿ. *ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ* **1980**
- **ಕನ್ನಡ ಗೀತನಾಟಕಗಳ ಆಧ್ಯಯನ** : ಡಾ. ವಿಜಯಲಕ್ಷ್ಮಿ ಸುಬ್ಬರಾವ್, **ಪಿಎಚ್.ಡಿ ಮಹಾಪ್ರಬಂಧ,** *ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು.* **1995**
- **ಆಧುನಿಕ ಕನ್ನಡ ನಾಟಕ** : ಡಾ.ಕೆ.ಮರುಳಸಿದ್ಧಪ್ಪ, *ಅಂಕಿತ ಪುಸ್ತಕ ಬೆಂಗಳೂರು.* **2002**
- **ಸಾಹಿತ್ಯ ಮತ್ತು ನೃತ್ಯ** : ಡಾ.ಚೂಡಾಮಣಿ ನಂದಗೋಪಾಲ್. *ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.* **1993**
- **ಆಯ್ದ ಕಥನ ಕವನಗಳು** : ಎಚ್.ಎಸ್ ವೆಂಕಟೇಶ ಮೂರ್ತಿ, ನರಹಳ್ಳಿ ಬಾಲಸುಬ್ರಹ್ಮಣ್ಯ, *ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ.* **1987**
- **ಕನ್ನಡ ಸಾಹಿತ್ಯ ಚರಿತ್ರೆ** : ಡಾ. ತ.ಸು.ಶ್ಯಾಮರಾಯರು, *ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲ ಮೈಸೂರು* **2001**
- **ಆಧುನಿಕ ಕನ್ನಡ ಕಾವ್ಯ** : (ಸಮಾಜ : ಸಂಸ್ಕೃತಿ) ಡಾ.ಲೋಕೇಶ ಅಗಸರಗಟ್ಟಿ. *ಅಲೋಕ ಪ್ರಕಾಶನ ಚಿತ್ರದುರ್ಗ* **2003**
- **ವೃತ್ತಿ ರಂಗ ದರ್ಶನ** : ಸಂಪಾದಕರು ಡಾ.ಎಚ್.ಕೆ.ರಂಗನಾಥ್. *ಕನ್ನಡ ಸಾಹಿತ್ಯ ಪರಿಷತ್.* **1993**
- **ಕರ್ನಾಟಕ ಸಂಗೀತ ವಾಹಿನಿ** : ಡಾ. ರಾ.ಸತ್ಯನಾರಾಯಣ, *ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು* **2001**
- **ಪ್ರದರ್ಶನ ಕಲೆಗಳು** : ಡಾ. ಕೆ.ಶ್ರೀಕಂಠಯ್ಯ, *ಅಖಿಲು ಸೇವಾಸಂಸ್ಥೆ.* **2003**
- **ಆಧುನಿಕ ಕನ್ನಡ ಕಾವ್ಯ** : ಚನ್ನವೀರ ಕಣವಿ, ಡಾ.ರಾಘವೇಂದ್ರರಾವ್. ಕರ್ನಾಟಕ ವಿಶ್ವವಿದ್ಯಾಲಯ *ಧಾರವಾಡ.* **1976**


***(ಲೇಖಕರು ಬೆಂಗಳೂರು ವಿಶ್ವವಿದ್ಯಾನಲಯದಲ್ಲಿ ನೃತ್ಯ ವಿಭಾಗದ ಉಪನ್ಯಾಸಕರು ಮತ್ತು 'ಭರತನಾಟ್ಯಕ್ಕೆ ಪೂರಕವಾಗುವ ಆಧುನಿಕ ಕನ್ನಡ ಕಾವ್ಯ : ಒಂದು ಅಧ್ಯಯನ ಎಂಬ ವಿಷಯದಲ್ಲಿ ಪಿಎಚ್‌ಡಿ ಅಧ್ಯಯನ ನಿರತರು.)***

## ನಿಮ್ಮ ಬರಹ ನಮ್ಮ ಓದು...

**ನೂಪುರ ಭ್ರಮರಿಯ ಸಂಪಾದಕಿ ಮನೋರಮಾ ಬಿ.ಎನ್. ಅವರಿಗೆ 'ಕರ್ನಾಟಕದಲ್ಲಿ ನಟ್ಟುವಾಂಗ ಪರಂಪರೆ : ಒಂದು ವಿಶ್ಲೇಷಣಾತ್ಮಕ ಅಧ್ಯಯನ' ಎಂಬ ವಿಷಯಕ್ಕಾಗಿ ಕರ್ನಾಟಕ ಸರ್ಕಾರದ ಸಂಗೀತ ಮತ್ತು ನೃತ್ಯ ಅಕಾಡೆಮಿಯ ಒಂದು ವರ್ಷದ ಸಂಶೋಧನಾ ಫೆಲೋಶಿಫ್ ದೊರೆತಿದೆಯೆಂದು ತಿಳಿಸಲು ಸಂತೋಷಿಸು ತ್ತೇವೆ.**

**ಯಕ್ಷಗಾನ ವಿದ್ವಾಂಸ ಮೇಲುಕೋಟೆ ಉಮಾಕಾಂತ ಭಟ್, ಬೆಂಗಳೂರಿನ ನೃತ್ಯ ಗುರುಗಳಾದ ರೇವತಿ–ನರಸಿಂಹನ್, ಉದ್ಯಮಿ ಶ್ರೀ ಸುಧಾಕಿರಣ್, ಧಾರವಾಡದ ಯೋಗ ಉಪನ್ಯಾಸಕ ಅಜೇಯ ಎ.ಎನ್, ನೂಪುರ ಭ್ರಮರಿಯ ವಿವಿಧ ನೆಲೆಯ ಪ್ರಯತ್ನಗಳಿಗೆ ಶ್ಲಾಘಿಸಿ, ಪ್ರತಿಕ್ರಿಯಿಸಿದ್ದಾರೆ. ರಾಷ್ಟ್ರಪ್ರಶಸ್ತಿ ವಿಜೇತ ಕನ್ನಡ ಚಲನಚಿತ್ರ ನಿರ್ದೇಶಕ ಬಿ.ಸುರೇಶ್, ಬೆಂಗಳೂರಿನ ನೃತ್ಯ ಶಿಕ್ಷಕ ಸುಧೀರ್ ಕುಮಾರ್, ಕುಮಟಾದ ಅನಿಲ್ ಶಂಕರಭಂಡಾರಿ, ಗೋವಾದ ವಸಂತಪ್ರಕಾಶ್ ಕಕ್ಕೆಪದವು, ಬೆಳಗಾಂನ ಬೈಲಹೊಂಗಲದ ಆನಂದ ಹಣಮಂತಗಡ, ಪುತ್ತೂರಿನ ಅಮೃತಾ ಭಟ್, ಸುಮಂಗಲಾ, ಉಡುಪಿಯ ಶ್ರೀನಿವಾಸ್ ಅವರು ಈ ಸಾಲಿನ ಚಂದಾ ಸದಸ್ಯರಾಗಿದ್ದಾರೆ.**

ಗೆಜ್ಜೆನಾದವು ಗಿಣಿಗಿಣಿಗಿಣಿಸುವಂತೆ ಕ್ಲಪ್ತ ಸಮಯಕ್ಕೆ, ನಮ್ಮೆಲ್ಲಾ ನಿರೀಕ್ಷೆಗಳು ನಿಜವಾಗುವಂತೆ ತಿಂಗಳ ತಿರುಳ ಭ್ರಮರಿ ನೂಪುರವು ಬರುತ್ತಲಿದೆ. ಓದುಗರು ಅಸಂಖ್ಯಾತರಿರಬಹುದು. ಆದರೆ ಮೊದಲಿಗರು ವಿಠಲರು ಎಂಬುದು ಸತ್ಯಸ್ಯ ಸತ್ಯ. ತಮ್ಮ ಸಾಹಿತ್ಯ ಸರೋವರದಲ್ಲಿ ನನ್ನದು ಕಿರಿದಾದ ಕೊಳವೆಂದೇ ಅನಿಸಿಕೆ.

**–ಮಾಸ್ಟರ್ ವಿಠಲ್, ಹಿರಿಯ ನೃತ್ಯ ಗುರುಗಳು, ಮಂಗಳೂರು.**

---

## ಸಂಶೋಧನಾ ಸಂಗ್ರಹ ಸಮೀಕ್ಷೆ

ನೂಪುರ ಭ್ರಮರಿ ಪತ್ರಿಕೆಯು ಕರ್ನಾಟಕದಲ್ಲಿ ಈಗಾಗಲೇ ನೃತ್ಯಕ್ಷೇತ್ರದಲ್ಲಿ ತೊಡಗಿಸಿಕೊಂಡ ಸಂಶೋಧಕರ ಕುರಿತಾದ ಮಾಹಿತಿಯನ್ನು ಸಂಕಲಿಸಿ ಕ್ರೋಢೀಕರಿಸಿ ಮುಖ್ಯವಾಹಿನಿಗೆ ತರುವ ಪ್ರಯತ್ನದಲ್ಲಿದೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಈಗಾಗಲೇ ನೃತ್ಯದಲ್ಲಿ ಆದ/ಆಗುತ್ತಿರುವ ಪಿಎಚ್‌ಡಿ/ಎಂಫಿಲ್ ಪ್ರಬಂಧಗಳು ಮತ್ತು ಪದವಿ ಪ್ರೌಢ ಪ್ರಬಂಧಗಳ ರಚನಾಕಾರರು/ಸಂಶೋಧಕರ ಕುರಿತು ಪತ್ರಿಕೆಯು ಅಂಕಣ ಮತ್ತು ಸಾವಕಾಶವಾಗಿ ಪುಸ್ತಕರೂಪದಲ್ಲಿ ಸಂಕಲನವನ್ನು ಹೊರತರಲಿದೆ. ಈಗಾಗಲೇ ಈ ಕುರಿತಂತೆ ಜಿಲ್ಲಾವಾರು ಪ್ರಾಥಮಿಕ ವಿವರಗಳು ಕ್ರೋಢಿಕೃತವಾಗಿದ್ದು ಮುಂದಿನ ಹಂತಗಳಿಗೆ ತಮ್ಮ ಸಹಕಾರದ ಅಗತ್ಯವಿದೆ. ಈ ಸಂಕಲನರೂಪವು ನೃತ್ಯ ಕ್ಷೇತ್ರದಲ್ಲಿ ಆಗಬೇಕಾದ ಸಂಶೋಧನೆಗಳ ಹಿನ್ನಲೆಯನ್ನು ಗಮನಿಸಿ ಕಲಾಸಕ್ತರ ಹಿತಾಸಕ್ತಿಯ ನಿಟ್ಟಿನಲ್ಲಿ ಆಗಲಿದ್ದು; ಶೈಕ್ಷಣಿಕ ವಲಯಕ್ಕೆ ಮತ್ತು ಸಂಶೋಧನಾಸಕ್ತ ಕಾರ್ಯಗಳ ಮಾಹಿತಿ ಸಂಗ್ರಹಣೆಗೆ ಸಹಕಾರಿಯಾಗಲಿದೆ.

ಆದ್ದರಿಂದ ಕರ್ನಾಟಕದಲ್ಲಿ ನೃತ್ಯ ಮತ್ತು ಅದಕ್ಕೆ ಪೂರಕವಾಗಿ ಇತಿಹಾಸ, ವಾಸ್ತುಶಿಲ್ಪ, ಸಂಗೀತ, ಶಿಲ್ಪಕಲೆ, ದೃಶ್ಯಕಲೆ, ಜಾನಪದ, ಸಮಕಾಲೀನ, ಸಾಮಾಜಿಕ ದೃಷ್ಟಿಕೋನ ಮುಂತಾಗಿ ವಿವಿಧ ಆಯಾಮಗಳಲ್ಲಿ ಆಗಿರುವ/ಆಗುತ್ತಿರುವ ಪ್ರಕಟಿತ/ಅಪ್ರಕಟಿತ, ಕನ್ನಡ/ಇಂಗ್ಲೀಷ್‌ನಲ್ಲಿ ಹೊರಬಂದ ಪಿಎಚ್‌ಡಿ/ಎಂಫಿಲ್ ಪ್ರಬಂಧ ಅಥವಾ ಪದವಿ ಪ್ರೌಢ ಪ್ರಬಂಧಗಳ (ಎಂ.ಎ ಡಸರ್ಟೇಶನ್, ಫೆಲೋಶಿಫ್ ಪ್ರಬಂಧಗಳು) ರಚನಾಕಾರರು, ಪದವಿಗೆ ಸಲ್ಲಿಸಲಾದ ವಿಷಯ ಮತ್ತು ಅದರ ಕುರಿತು ಸಂಶೋಧನಾ ಉದ್ದೇಶ ಮತ್ತು ಅಧ್ಯಯನ ವಿಧಾನವನ್ನೊಳಗೊಂಡ ಸಾರಲೇಖ ಹಾಗೂ ವಿಶ್ವವಿದ್ಯಾನಿಲಯ ಅಥವಾ ಕಾಲೇಜು, ಮಾರ್ಗದರ್ಶಕರು, ಸಲ್ಲಿಸಲಾದ ವರ್ಷ, ಸಂಶೋಧನೆಯು ಪ್ರಕಟಿತ ಕೃತಿಯಾಗಿದ್ದಲ್ಲಿ ಅದರ ಕುರಿತು ವಿವರ, ಪ್ರಕಟಿತ ಕೃತಿಯನ್ನು ಕಳಿಸುವ ಅನುಕೂಲವಿದ್ದಲ್ಲಿ ಒಂದು ಸಾದರಪ್ರತಿ, ಸಂಶೋಧನೆಗೆ ಸಂಬಂಧಿಸಿದ ಅನುಭವದ ವಿವರ, ಪಾಸ್ ಪೋರ್ಟ್ ಅಳತೆಯ ಭಾವಚಿತ್ರ, ಫುಲ್‌ಸ್ಕೇಪ್ 2 ಪುಟ ಮೀರದಂತೆ ಸ್ವವಿವರದ ಬಯೋಡಾಟಾವನ್ನು ಸಂಕ್ಷಿಪ್ತವಾಗಿ ಕಳುಹಿಸಬೇಕೆಂದು ವಿನಂತಿ. ✻

**ದರ್ಪಣ**

# ನೃತ್ಯರಂಗದ ಅನಭಿಷಿಕ್ತ ರಾಣಿ : ರುಕ್ಮಿಣಿ
## (ಹೆಜ್ಜೆ : 13 )

**ಕಳೆದ ಸಂಚಿಕೆಯಿಂದ...**



*(ರುಕ್ಮಿಣಿಯವರ ಸರಳ ನಡೆನುಡಿಯ ದ್ಯೋತಕವಾಗಿ ಕಲಾಕ್ಷೇತ್ರ ಸೀರೆಗಳು ಅಭಿರುಚಿಯನ್ನು ವೃದ್ಧಿಸಿತು. ಅಂತೆಯೇ ಆಭರಣವನ್ನು ಅವರೆಂದೂ ಕರಕೌಶಲ್ಯವೆಂದೋ, ಮುತ್ತು ರತ್ನಗಳ ಬೆಲೆಬಾಳುವ ವಸ್ತುವೆಂದೋ ನೋಡಲಿಲ್ಲ. ಮಧ್ಯಮ ವರ್ಗೀಯ, ಶ್ರೀಮಂತ ವರ್ಗದ ಮಹಿಳೆಯರನ್ನು ನಟ್ಟುವನ್ನಾರ್‌ಗಳಾಗಿ, ಕಲಾವಿದರಾಗಿ ಬೆಳೆಸುವಲ್ಲಿ ಶ್ರಮಿಸಿದರು. ಮಹಿಳೆಯರಿಗೆ ನೃತ್ಯದ ಪಾತ್ರಗಳಲ್ಲಷ್ಟೇ ಪ್ರಧಾನ ಪಾತ್ರ ನೀಡದೆ ಅವರ ಸ್ವ–ಪ್ರಾತಿನಿಧ್ಯಕ್ಕೂ, ಸ್ವಾವಲಂಬಿ ತನಕ್ಕೂ ಇಂಬು ಕೊಟ್ಟರು. ಮಹಾಮಹೋಪಾಧ್ಯಾಯ ಡಾ.ಯು.ವಿ. ಸ್ವಾಮಿನಾಥ ಅಯ್ಯರ್ ರುಕ್ಮಿಣಿಗೆ ಒಂದಷ್ಟು ತಮಿಳು ಗ್ರಂಥ, ಓಲೆಗರಿಗಳನ್ನು ಕಾಣಿಕೆಯಾಗಿ ನೀಡಿದ್ದರ ಪೈಕಿ ಕೆಲವೊಂದು ಸಾಹಿತ್ಯಗಳನ್ನು ಭಾಷಾಂತರಿಸಲು ಮತ್ತು ಮುದ್ರಿಸಲು ರುಕ್ಮಿಣಿ ಮೊದಲ್ಗೊಂಡರು. 1944ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದೊಂದಿಗೆ ಕಲಾಕ್ಷೇತ್ರದ ಸಂಗೀತದ ಡಿಪ್ಲೋಮಾ ಕೋರ್ಸ್ ಅಫಿಲಿಯೇಟ್ ಆಯಿತು. 1950ರ ಹೊತ್ತಿಗೆ ಭಾರತದೆಲ್ಲೆಡೆಯಿಂದಷ್ಟೇ ಅಲ್ಲದೆ ; ಟಿಬೆಟ್, ನೇಪಾಳ, ಭೂತಾನ್, ಮಲೇಷ್ಯಾ, ಶ್ರೀಲಂಕಾ, ಸಿಂಗಾಪುರ್, ಇಂಡೋನೇಷ್ಯಾ, ಯೂರೋಪ್, ಆಸ್ಟ್ರೇಲಿಯಾ, ಅಮೆರಿಕಾದಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಅಪೇಕ್ಷಿಗಳಾಗಿ ಕಾಲಿಡಲು ಸಾಧ್ಯವಾಯಿತು.)*

ಕ್ಷೇತ್ರವೆಂದರೆ ದೈವಿಕವಾದ ಜಾಗ. ಮಾನವ ಸಹಜ ಭಾವಗಳಿಂದ ದೈವೀಕ ಅನುಭೂತಿಯ ಹತ್ತಿರ ಕೊಂಡೊಯ್ಯುವ ಸ್ಥಳ. ಯಾತ್ರೆಗೆ ಭಕ್ತರು ಆಯ್ದುಕೊಳ್ಳುವುದೇ ವಿವಿಧ ಧಾರ್ಮಿಕ ಕ್ಷೇತ್ರಗಳನ್ನು. ಅಂತೆಯೇ ನೃತ್ಯಕ್ಕೊಂದು ಕ್ಷೇತ್ರ ನಿರ್ಮಾಣ ಮಾಡುವ ಗುರಿ ರುಕ್ಮಿಣಿಯವರದ್ದಾಗಿತ್ತು. 'ರಸೋ ವೈ ಸಃ'– ರಸಾಸ್ವಾದನವೆಂಬ ಅಮೂರ್ತ ಅನುಭವಕ್ಕೆ ಕೊಂಡೊಯ್ಯುವ ಕಲೆಗಳ ದೇವಸ್ಥಾನವೇ ಕಲಾಕ್ಷೇತ್ರವಾಗಿರಬೇಕು ಎಂಬುದು ಅವರ ಇಚ್ಛೆ.

ಆಕೆ ಸಾಮಾಜಿಕ ಇತಿಹಾಸ ತಜ್ಞೆಯೆಂಬಂತೆ ಕಟ್ಟಿದ ಇತಿಹಾಸವನ್ನು ರಕ್ಷಿಸಬೇಕೆಂಬ ಕಳಕಳಿಯಿದ್ದವರು. ಉತ್ತಮ ಕಲಾಸಮುದಾಯವು ಕಲಾಕ್ಷೇತ್ರದ ಸುತ್ತಲೂ ಬೆಳೆಯಬೇಕೆಂದು ಮದ್ರಾಸ್ ಕಾರ್ಪೋರೇಷನ್‌ನ್ನು ವಿನಂತಿಸಿ ರಸ್ತೆ ಮುಂತಾದ ಸೌಲಭ್ಯಗಳನ್ನು ಕಲ್ಪಿಸಲು ಶ್ರಮಿಸಿದರು. ಇಂತಹ ಶ್ರಮ ಮುಂದೊಮ್ಮೆ ಆಕೆಯ ಸಂಸ್ಥೆಯ ಕುರಿತಾದ ದೃಷ್ಟಿಗೆ ಅನುರೂಪವಾಗಿ, ಸಹಕಾರಿಯಾಗಿ ಬೆಳೆದು ಒಂದೊಮ್ಮೆ ತೊಂದರೆ, ಅಪಾಯ ಬಂದರೂ ಆಶಾಕಿರಣವಾಗುತ್ತದೆ ಎಂಬ ಮುನ್ಸೂಚನಾ ಗುಣ ಅವರಲ್ಲಿತ್ತು. ಅದರಂತೆಯೇ ಬೆಸೆಂಟ್ ನಗರದ ಭಾಗವಾಗಿ, ಕಲಾಕ್ಷೇತ್ರ ಕಾಲೋನಿ ಎಂದೇ ಆ ವಲಯ ಹೆಸರಾಗಿದೆ.

ನಿಜವಾದ ಕಲಾವಿದರು ಯಾವತ್ತು ಅಂತರ್‌ಶಿಸ್ತೀಯ ಗುಣಗಳುಳ್ಳವರಾಗಿರುತ್ತಾರೆ. 1958ರ ನಂತರ ಕಲಾಕ್ಷೇತ್ರ ಕಲರ್ ಲ್ಯಾಬೋರೇಟರಿಯನ್ನು ಸ್ಥಾಪಿಸಿತ್ತು. ದೊಡ್ಡ ದೊಡ್ಡ ಪತ್ರಿಕೆಗಳೂ ಭೇಟಿ ನೀಡುವ ಫೋಟೋಗ್ರಫಿ ಲ್ಯಾಬ್ ಆಗಿ ಬೆಳೆದು ಸ್ವಲ್ಪ ದಿನಗಳಲ್ಲಿ ಮುದ್ರಣವೂ ಶುರುವಾಯಿತು. ಪಠ್ಯ ಮತ್ತು ಬೇರೆ ಪುಸ್ತಕಗಳ ಪ್ರಕಟಣೆಯ ಕಾರ್ಯವೂ ಆರಂಭವಾಗಿ ಕಲಾಕ್ಷೇತ್ರ ಪಬ್ಲಿಕೇಷನ್ ಬೆಳೆದುಬಂತು. ಸ್ವಾಮಿನಾಥನ್ ಗ್ರಂಥಾಲಯದ ಮೂಲಕ ಶಾಸ್ತ್ರ ಕಲಿಕೆಗೆ ಅನುಕೂಲವಾಯಿತು. ನಂತರ ಹಲವಾರು ಸಂಸ್ಥೆಗಳು ಈ ಮಾದರಿಯನ್ನು ಅನುಸರಿಸಿದವು.

ಇಂದಿನ ಕಾಲಕ್ಕೆ ದೇಶದ ಪ್ರತಿಯೊಂದು ಕಾಲೇಜು–ವಿದ್ಯಾಸಂಸ್ಥೆಗಳು ತಮಗೆ ಸ್ವಾಯತ್ತ ವಿಶ್ವವಿದ್ಯಾನಿಲಯದ ಸ್ಥಾನ ಬೇಕೆಂದು ಯಾವ ಅರ್ಹತೆಯಿಲದಿದ್ದರೂ ಹಠ ಮಾಡುವ ಸಂದರ್ಭದಲ್ಲಿ ಒಂದು ಕಾಲಕ್ಕೆ ಕಲಾಕ್ಷೇತ್ರವನ್ನು ಡೀಮ್ಡ್ ವಿಶ್ವವಿದ್ಯಾಲಯ ಮಾಡಲು ಯುಜಿಸಿಯೇ ಪ್ರಸ್ತಾಪವನ್ನು ಇಟ್ಟು ಮೀಟೀಂಗ್ ಕರೆದಾಗ ರುಕ್ಮಿಣಿ ಹೇಳಿದ್ದೇನು ಗೊತ್ತೇ? 'ನಿಮ್ಮ ಆಶಯಗಳು ಒಳ್ಳೆಯದೇನೋ ಹೌದು. ಆದರೆ ನೀವು ಹೇಳುವ ನೀತಿ ನಿಯಮಗಳು ಕಲಾಕ್ಷೇತ್ರದ ಉದ್ದೇಶಗಳು, ಕಾರ್ಯಕ್ರಮಗಳಿಗೆ ಅಷ್ಟಾಗಿ ಒಪ್ಪುವುದಿಲ್ಲ. ಉದಾ – ನಿವೃತ್ತಿಯ ವಯಸ್ಸಿನ ಮಿತಿ. ಲಲಿತಲಕಲೆಗಳ ಕ್ಷೇತ್ರದಲ್ಲಿ ನಿವೃತ್ತಿಯೆಂಬುದೇ ಇಲ್ಲ. ಕಲಾವಿದರು ಮಾಗಿದಂತೆ ಅರಿವಿನಲ್ಲಿ ಹಿರಿಯರಾಗುತ್ತಾರೆ. ಅಂತೆಯೇ ತರಗತಿಗಳ ಸಮಯ ಮಿತಿ ಒಂದು ಅರ್ಥಹೀನ ಕಟ್ಟುಪಾಡು. ಅದೂ ಒಪ್ಪುವಂತಹುದಲ್ಲ. ಗುರು ಆಶಿಸಿದಾಗ ವಿದ್ಯಾಥಿಗಳು ಕಲಿಯುವುದು ನಮ್ಮ ಪರಂಪರೆ. ಕಲಿಯುವಿಕೆಯ ಪ್ರಕ್ರಿಯೆಯಲ್ಲಿ ಸ್ವಾತಂತ್ರ್ಯ ಇರಬೇಕು. ಇಲ್ಲಿ ಕಲಿಸುವವರು ಮಹಾ ವಿದ್ವಾಂಸರು. ಅವರು ಕಲೆಗಾಗಿ ಬದುಕುತ್ತಾರೆಯೇ ವಿನಾ ಎಂದೂ ದುಡ್ಡಿಗಾಗಿ ದುಡಿಯುವುದಿಲ್ಲ.  ನಿಮ್ಮ ಆಧುನಿಕತೆಗೆ ದಿಕ್ಕೆಂಬುದಿಲ್ಲ. ನಿಮ್ಮ ಆಧುನಿಕತೆಯಲ್ಲಿ ನನ್ನ ಆತ್ಮವನ್ನು ಕಳೆದುಕೊಳ್ಳಲಾರೆ. ನಿಮ್ಮ ಆಶಯ ಮತ್ತು ಅಹವಾಲುಗಳನ್ನು ನಿಮ್ಮ ಜೊತೆಯಲ್ಲಿರಿಸಿಕೊಳ್ಳಿ. ನಮಗೆ ನಮ್ಮದೇ ಪರಂಪರೆಯ ವಿಧಾನಗಳಿವೆ. ಅದು ನಮಗೆ ಒಪ್ಪುತ್ತದೆ ಎಂದು ಖಡಾಖಂಡಿತವಾಗಿ ವಿನಯವಾಗಿ ನಿರಾಕರಿಸಿದ್ದರು. ಕಲಾಕ್ಷೇತ್ರ ಪೂರ್ಣವಾಗಿ ಸರ್ಕಾರದ ಅಧೀನವಾಗುವುದು ರುಕ್ಮಿಣಿಗೆ ಮನಸ್ಸಿರಲಿಲ್ಲ. ಕಲಾಕ್ಷೇತ್ರ ಮುಂದೊಂದು ದಿನ ಡೀಮ್ಡ್ ವಿಶ್ವವಿದ್ಯಾನಿಲಯವಾದದ್ದು ಅವರ ನಿಧನದ ನಂತರವೇ !

ಕಲೆಯೆಂದರೆ ಜಾಗತಿಕ ಜೀವನಶಕ್ತಿಯ ಅಭಿವ್ಯಕ್ತಿ. ಪ್ರತಿಯೊಬ್ಬರು ಒಂದಲ್ಲ ಒಂದು ಹಂತದಲ್ಲಿ ತಮ್ಮ ಜೀವನವಿಧಾನದಲ್ಲಿ ಒಂದಲ್ಲ ಒಂದು ಹಂತದಲ್ಲಿ ಕಲಾವಿದರೇ ಆಗಿರುತ್ತಾರೆ ಎನ್ನುತ್ತಿದ್ದ ರುಕ್ಮಿಣೀ ಸೌಂದರ್ಯವೆಂಬುದು ಮಾನವನಪ್ರಜ್ಞೆಯನ್ನು ಐಕ್ಯತೆಯೆಡೆಗೆ ಕೊಂಡೊಯ್ಯುವ  ಮತ್ತು ಆ ಮೂಲಕ ಮಾನವ ಸಮಾಜವನ್ನು ಸುಧಾರಿಸುವ ದಾರಿ. ಸಂಗೀತ, ನೃತ್ಯ ಮತ್ತು ಜೀವನದ ಪ್ರತಿಯೊಂದು ಹಂತಗಳು, ಅನುಭವಗಳು ನಮ್ಮನ್ನು ಕರೆದೊಯ್ಯುವುದು ಅರಳುವಿಕೆ ಅಥವಾ ಸೌಂದರ್ಯವೆಂಬ ಅಪೂರ್ವ ಅನನ್ಯ ಸಂಗತಿಯೆಡೆಗೆ. ಕಲೆಯಿಂದ ಜೀವನದಲ್ಲಿ ಜಗತ್ತಿನೆಡೆಗೆ ಸಂತೋಷವನ್ನು ಕಾಣಬಹುದು. ನಾವು ಅಸಹ್ಯವಾಗಿ ಬದುಕಿದರೆ ಜಗತ್ತೂ ಅಸಹ್ಯವೆಂಬಂತೆ ಭಾಸವಾಗುತ್ತದೆ. ಕ್ರೂರತೆ ಎಂಬುದು ಜಗತ್ತಿನ ಅಸಹ್ಯದ ಪರಮಾವಧಿ ಎಂದು ಶಿಷ್ಯರಿಗೆ ತಿಳಿಹೇಳುತ್ತಿದ್ದರು.

(ಸಶೇಷ)

## ಸಂಚಿಕೆಗಾಗಿ ಸಹಕರಿಸಿದವರು



- **ಕೆರೆಮನೆ ಶಿವರಾಮ ಹೆಗ್ಡೆ, ಯಕ್ಷಗಾನ ಕಲಾವಿದ–ಸಂಘಟಕ, ಗುಣವಂತೆ, ಹೊನ್ನಾವರ.**
- **ಕೆ. ಸೋಮನಾಥ್ ನಾಯಕ್, ಸಸ್ಯೋದ್ಯಾನ, ಗುರುವಾಯನಕೆರೆ, ದಕ್ಷಿಣ ಕನ್ನಡ.**




# ಅರ್ಜುನ ಐರಾವತ ತಂದದ್ದು ವಿಶೇಷವೇನೂ ಅಲ್ಲ!!

* ರಾಕೇಶ್‌ಕುಮಾರ್ ಕಮ್ಮಜೆ

ಯಾವುದೇ ಯಕ್ಷಗಾನ ಪ್ರಸಂಗವನ್ನು ರಾತ್ರಿಯಿಡೀ ಕುಳಿತು ನೋಡಿ ಸಾದ್ಯಂತವಾಗಿ ಗಮನಿಸಿ. ಜನ ಹೆಚ್ಚು ಪ್ರತಿಕ್ರಿಯಿಸುವುದು ಹಾಗೂ ಖುಷಿಪಡುವುದು ಹಾಸ್ಯ ಪಾತ್ರಕ್ಕೆ! ಹಾಸ್ಯ ಅನ್ನುವುದು ಯಕ್ಷಗಾನಗಳಲ್ಲಿ ಊಟದೊಂದಿಗಿನ ಉಪ್ಪಿನಕಾಯಿಯಂತಿರುವುದು ಮತ್ತು ಹಾಗೆಯೇ ಇರಬೇಕಾದದ್ದು ಹೌದಾದರೂ ಉಪ್ಪಿನಕಾಯಿಯೇ ಇಲ್ಲದಿದ್ದರೆ ಊಟ ರುಚಿಸುವುದಿಲ್ಲ ಅನ್ನುವುದನ್ನೂ ಅಲ್ಲಗಳೆಯುವಂತಿಲ್ಲ. ಹಾಗಾಗಿಯೇ ಹಾಸ್ಯ ಕಲಾವಿದರಿಗೆ ಸಾಕಷ್ಟು ಗೌರವವಿದೆ. ಅದರಲ್ಲೂ ಕೆಲವೊಂದು ನಗರಗಳಲ್ಲಿ ನಗುವುದಕ್ಕಂತಲೇ ಒಂದೊಂದು ಕ್ಲಬ್ ಸ್ಥಾಪನೆಯಾಗಿರುವುದನ್ನು ಎಣಿಸುವಾಗ ಯಾರಿಗೇ ಆದರೂ ನಗು ಬರದಿರದು! ಹೀಗಾಗಿಯೇ ಎಲ್ಲರನ್ನೂ ಸಹಜವಾಗಿ ನಕ್ಕು ನಗಿಸುವ ಹಾಸ್ಯ ಕಲಾವಿದರನ್ನು ಎಲ್ಲರೂ ಮೆಚ್ಚಲೇಬೇಕು.

ಆದರೂ ಈಗೀಗಿನ ಕೆಲವು ಅಸಂಬದ್ಧ ಹಾಸ್ಯಗಳನ್ನು ಕೇಳಿಸಿಕೊಳ್ಳುವಾಗ ವೇದನೆಯಾಗುತ್ತದೆ. ನಗಿಸಬೇಕೆಂಬ ಭರದಲ್ಲಿ ಏನೇನೋ ಹೇಳುವುದು, ಇಂಗ್ಲೀಷ್ ಬಳಸುವುದು, ಕಳಪೆ ಹಾಸ್ಯ ಮಾಡುವುದು ಇತ್ಯಾದಿಗಳನ್ನು ನೋಡುವಾಗ ಕಿರಿಕಿರಿಯೆನಿಸುತ್ತದೆ. ಆದರೆ ಬೆರಳೆಣಿಕೆಯ ಇಂತಹ ಹಾಸ್ಯ ಕಲಾವಿದರನ್ನು ಬದಿಗಿರಿಸಿದರೆ ಈಗಲೂ ಅನೇಕಾನೇಕ ಯೋಗ್ಯ ಹಾಸ್ಯ ಪಾತ್ರಧಾರಿಗಳಿದ್ದಾರೆನ್ನುವುದು ನಮಗೆಲ್ಲರಿಗೂ ತೃಪ್ತಿ ಕೊಡುವ ಸಂಗತಿ. ಕೆಲವೊಬ್ಬರ ಹಾಸ್ಯ ಕೇಳುವಾಗ ಬಿದ್ದು ಬಿದ್ದು ನಗುವಂತಾಗುತ್ತದೆ. ಯೋಗ್ಯ ಹಾಸ್ಯ–ನಗು ಯಕ್ಷಗಾನದ ನಡುನಡುವೆ ಹೊಮ್ಮುತ್ತಲೇ ಇರುತ್ತವೆ.

ನಿಮಗೆ ಮೂಲತಃ ಭಾಗಮಂಡಲದವರಾದ ಮಹಾಬಲ ಭಟ್ ಅನ್ನುವ ಹಾಸ್ಯ ಕಲಾವಿದನ ಬಗೆಗೆ ಗೊತ್ತಿರಬಹುದು. ಪ್ರಸ್ತುತ ಸಂದರ್ಭದ ಉತ್ತಮ ಹಾಸ್ಯ ಕಲಾವಿದರಲ್ಲಿ ಅವರೂ ಒಬ್ಬರೆನ್ನುವುದಕ್ಕೆ ಯಾವುದೇ ಅಡ್ಡಿಯಿಲ್ಲ. ಹಾಗಾಗಿ ಅವರ ಪರಿಚಯ ನಾನು ಮಾಡಿಕೊಡಬೇಕಿಲ್ಲ. ಬದಲಿಗೆ ಅವರ ಹಾಸ್ಯದ ತುಣುಕುಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ. ಸುಮ್ಮನೇ ಸಂದರ್ಭಗಳನ್ನು ಊಹಿಸಿಕೊಂಡು ಓದಿಕೊಳ್ಳಿ. ಖುಷಿಯಾದೀತು.

ರಾಮನ ವಧೆಗಾಗಿ ರಾವಣ ತನ್ನ ಮಿತ್ರನಾದ ಮೈರಾವಣನನ್ನು ನೆನೆದು ಆಸ್ಥಾನಕ್ಕೆ ಬರಲು ಆಹ್ವಾನಿಸುತ್ತಾನೆ. ಮೈರಾವಣನನ್ನು ಅರಮನೆಯ ದ್ವಾರದಿಂದ ಕಾವಲು ಭಟ ರಾವಣನೆಡೆಗೆ ಕರೆತರುತ್ತಾನೆ. ಮೈರಾವಣನ್ನು ಕಂಡದ್ದೇ ತಡ ರಾವಣ ಸಿಂಹಾಸನದಿಂದಿಳಿದು ಮೈರಾವಣನಲ್ಲಿ 'ಮಿತ್ರಾ ಆಸೀನನಾಗು' ಎನ್ನುತ್ತಾನೆ. ಆಗ ಮೈರಾವಣ 'ಗೆಳೆಯಾ ನಾವಿಬ್ಬರೂ ಸ್ನೇಹಿತರಾದರೂ ನೀನೀ ಪುರದ ಅರಸ. ಹಾಗಾಗಿ ನಿನ್ನ ಸಿಂಹಾಸನವನ್ನು ನಾನೇರಲಾರೆ, ನೀನು ಆಸೀನನಾಗು' ಎನ್ನುತ್ತಾನೆ. ಆದರೆ ರಾವಣ ಪುನಃ ಒತ್ತಾಯಿಸುತ್ತಾನೆ. ಮೈರಾವಣ ನಿರಾಕರಿಸುತ್ತಾನೆ. ಹೀಗೆ ರಾವಣ ಪದೇ ಪದೇ ಒತ್ತಾಯಿಸುವುದು ಮೈರಾವಣ ನಿರಾಕರಿಸುವುದು ನಡೆಯುತ್ತಲೇ ಇರುತ್ತದೆ. ಆಗ ಅಲ್ಲೇ ಇರುವ ದೂತ (ಮಹಾಬಲ ಭಟ್) ಎದುರು ಬಂದು 'ಇವರಿಬ್ಬರೂ ಆಸೀನರಾಗುವ

ಲಕ್ಷಣ ಕಾಣ್ತಾ ಇಲ್ಲ, ಇವ್ರು ಮಾತು ಮುಗಿಸುವವರೆಗೆ ನಾನು ಆಸೀನನಾಗುತ್ತೇನೆ' ಎನ್ನುತ್ತಾ ಸಿಂಹಾಸನ ಏರಲು ಹೊರಡುತ್ತಾನೆ. ಈ ಸನ್ನಿವೇಶ ವೀಕ್ಷಕರಲ್ಲಿ ಎಂತಹ ನಗು ಉಕ್ಕಿಸುತ್ತದೆಯೆಂದರೆ ಆ ನಗುವಿನಲ್ಲಿ ಯಾತನೆ ಇರುವುದಿಲ್ಲ !

ಹಾಗೆಯೇ ಇನ್ನೊಂದು ಸಂದರ್ಭ. ಪ್ರಮೀಳಾರ್ಜುನ ಕಾಳಗದ ಅಂತಿಮ ಹಂತದಲ್ಲಿ ಅರ್ಜುನನಿಗೆ ಅಶರೀರವಾಣಿಯೊಂದು ಕೇಳಿಸುತ್ತದೆ. ಆ ಅಶರೀರವಾಣಿ 'ಅರ್ಜುನಾ ಯುದ್ಧ ನಿಲ್ಲಿಸು, ಸಂಧಾನ ಮಾಡಿಕೋ' ಅನ್ನುತ್ತದೆ. ಆಗ ಅರ್ಜುನ ತನ್ನ ದೂತನಲ್ಲಿ 'ಅರೆ, ಯಾರೋ ಮಾತಾಡಿದಂತಾಯಿತಲ್ಲ? ಯುದ್ಧ ನಿಲ್ಲಿಸು, ಸಂಧಾನ ಮಾಡಿಕೋ ಅಂದಂತಾಯಿತಲ್ಲ?' ಅನ್ನುತ್ತಾನೆ. ಆಗ ದೂತ 'ಹೌದು ಹೌದು ಯುದ್ಧ ನಿಲ್ಲಿಸು ಸಂತಾನ ಮಾಡಿಕೋ ಅಂತ ನನಗೂ ಕೇಳಿತು' ಅನ್ನುವಾಗ ಸಭಾಂಗಣದ ತುಂಬಾ ನಗೆ ತುಂಬದಿರುತ್ತದೆಯೇ?

ಹಾಗೆಯೇ ಗಂಭೀರ ಪಾತ್ರಗಳಲ್ಲೂ ಕೆಲವೊಮ್ಮೆ ಆರೋಗ್ಯಕರ ಹಾಸ್ಯ ಮೂಡಿಬರುವುದುಂಟು. ಯಾವುದೋ ಒಂದು ಪ್ರಸಂಗದಲ್ಲಿನ ಸಂದರ್ಭವೊಂದರ ಮಾತುಕತೆಯನ್ನು ಗಮನಿಸಿ. ಇದನ್ನು ಯಾರು ಹೇಳಿದ್ದು ಅಂತಲೂ ನನಗೀಗ ನೆನಪಿಲ್ಲ. ಘಟನೆ ಮಾತ್ರ ಉಲ್ಲೇಖಿಸಬಲ್ಲೆ. ಅರ್ಜುನ ಮತ್ತು ಓರ್ವ ಅರಸನ ನಡುವಿನ ಯುದ್ಧ. ಅರ್ಜುನ ಯುದ್ಧದ ಸಂದರ್ಭದಲ್ಲಿ ತಾನು ಈ ಹಿಂದೆ ಗೈದ ಮಹಾನ್ ಸಂಗತಿಗಳ ಬಗೆಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾ 'ಗಜಗೌರಿ ವ್ರತ ಮಾಡಬೇಕೆಂದು ತಾಯಿ ಬಯಸಿದ್ದೇ ತಡ ಊರಿಂದ ಅಲ್ಲ, ಪಕ್ಕದೂರಿಂದ ಅಲ್ಲ ಇಂದ್ರನೂರಿನಿಂದ ಐರಾವತವನ್ನೇ ಕೆಳಗಿಳಿಸಿ ತಂದವ ನಾನು' ಅನ್ನುತ್ತಾನೆ. ತಕ್ಷಣ ತಡೆದ ಎದುರು ಪಾತ್ರಧಾರಿ 'ಏನು ನೀನು ಐರಾವತವನ್ನು ತಂದೆಯಾ'?

'ಹೌದು'

'ಐರಾವತ ಇರುವುದೆಲ್ಲಿ?'

'ಸ್ವರ್ಗಲೋಕದಲ್ಲಿ'

'ಸ್ವರ್ಗದ ಅಧಿಪ ಯಾರು'?

'ದೇವೇಂದ್ರ'

'ಆ ದೇವೇಂದ್ರ ಸಂಬಂಧದಲ್ಲಿ ನಿನಗೇನಾಗ್ಬೇಕು?'

'ಅಪ್ಪ'

'ಥತ್, ಅಪ್ಪನ ಮನೆಯಲ್ಲಿದ್ದ ಒಂದು ಆನೆಯನ್ನು ತಂದ್ರೆ ಅದು ಮಹಾ ಸಾಧನೆಯಾ? ಅದೂ ಒಂದೇ ಒಂದು ಬಾರಿ ತಂದದ್ದಕ್ಕೆ ಇಷ್ಟೆಲ್ಲಾ ಮಾತಾಡ್ತಿ ಅಲ್ವಾ? ಇಕಾ, ನನ್ನಪ್ಪನ ಮನೆಯಲ್ಲಿರ್ಬೇಕಿತ್ತು, ಒಂದು ಸಲ ಅಲ್ಲ, ಎರಡು ಸಲ ಅಲ್ಲ, ವಾರಕ್ಕೆ ಮೂರು ಸಲ ಆನೆ ಬಂದು ಹೋಗ್ತಿತ್ತು. ಬಿಡು ಬೇರೇನಾದ್ರೂ ನೀನು ಸಾಧನೆ ಅಂದುಕೊಂಡದ್ದಿದ್ರೆ ಹೇಳು, ಕೇಳೋಣ'

ನಗುವುದಕ್ಕೆ ಯಕ್ಷಗಾನದಲ್ಲಿ ಎಷ್ಟೊಂದು ಅವಕಾಶಗಳಿವೆ ಮಾರಾಯ್ರೇ? ✻

ರಂಗ-ಭ್ರಮರಿ

# ನೃತ್ಯ ಮತ್ತು ದಲಿತರು : ಒಂದು ವಿಶ್ಲೇಷಣೆ

– ಶ್ವೇತಾ ಪ್ರಿಯದರ್ಶಿನಿ, ಬೆಂಗಳೂರು

ನೃತ್ಯಕಲೆಯ ಶ್ರೀಮಂತಿಕೆ ಶೂನ್ಯದಿಂದ ಹುಟ್ಟುವುದಿಲ್ಲ ; ಅದಕ್ಕೆ ಯಾವುದಾದರೊಂದು ಹಿನ್ನೆಲೆಯಿರಬೇಕು. ನೃತ್ಯಕಲೆಗೆ ದಲಿತ ಕಲಾವಿದರ ಕೊಡುಗೆ ಪ್ರತ್ಯಕ್ಷವಾಗಿ ಬಹಳ ಕಡಿಮೆ ಎಂದೆನಿಸಿದರೂ ಪರೋಕ್ಷವಾಗಿ ನೃತ್ಯಕಲೆಯಲ್ಲಿ ದಲಿತರ ಪೂರ್ವ ಚರಿತ್ರೆ ಅತ್ಯಂತ ಘನವಾದುದು. ಆದರೆ ಮರೆಗೆ ಸಂದುಹೋಗಿದೆ. ಈ ಜನಾಂಗ ಒಂದು ಕಾಲದಲ್ಲಿ ನೃತ್ಯಕ್ಕೆ ತಮ್ಮ ಜೀವನವನ್ನು ಅರ್ಪಿಸಿಕೊಂಡಿದ್ದು ಕಾಲಕ್ರಮೇಣದ ಬೆಳವಣಿಗೆಯಲ್ಲಿ ನೃತ್ಯ ಕಲೆಯ ಪ್ರಯೋಜನವನ್ನು ಪಡೆದುಕೊಳ್ಳುವಲ್ಲಿ ವಿಫಲರಾಗಿರುವುದಕ್ಕೆ ಕಾರಣವೇನು? ಅಲ್ಲದೇ ಎಷ್ಟರ ಮಟ್ಟಿಗೆ ನೃತ್ಯಕಲೆ ದಲಿತರಿಗೆ ಲಭಿಸಿದೆ, ಇದಕ್ಕೊಂದು ಹಿನ್ನೆಲೆಯಿದೆಯೇ?

ವೇದಗಳ ಕಾಲದಲ್ಲಿ ನಾಟ್ಯಕಲೆಯ ಪ್ರಸ್ತಾವನೆ ನಮಗೆ ಪ್ರಥಮ ಬಾರಿ ಋಗ್ವೇದದಲ್ಲಿ ಕಂಡುಬರುತ್ತದೆ. ಋಗ್ವೇದದ ಉಲ್ಲೇಖಗಳೇ ನೃತ್ಯಕಲೆಯ ಅತಿ ಪ್ರಾಚೀನವಾದ ಸಾಕ್ಷಿಗಳು. ನಂತರ ಅಥರ್ವ ವೇದದಲ್ಲಿ ವೈದಿಕಧರ್ಮ ವಿರೋಧಿಗಳಾದ ವ್ರಾತ್ಯ ಜನರ ಬಗ್ಗೆ ಉಲ್ಲೇಖಿಸಲಾಗಿದೆ. ಈ ವ್ರಾತ್ಯ ಜನರ ಆಚರಣೆಗಳಲ್ಲಿ ಮತೀಯ ದರ್ಶನ ಮತ್ತು ವಾಮಾಚಾರವು ಮುಖ್ಯವಾದುದು. ಅಲ್ಲದೇ ವಾದ್ಯ ಸಂಗೀತದ ಜೊತೆ ನೃತ್ಯ ಮಾಡುತ್ತಿದ್ದರು ಎಂಬುದಾಗಿ ತಿಳಿದು ಬರುತ್ತದೆ. ಸಂಗೀತ ನರ್ತನಗಳು ಅನಾಚಾರವನ್ನು ಪ್ರಚೋದಿಸುವ ಕಲೆಗಳೆಂದು ಅವಹೇಳನಕ್ಕೆ ಗುರಿಯದುದೂ ಹಾಗೂ ಅದರ ಮಗ್ಗುಲಲ್ಲಿ ಅಧ್ಯಯನಕ್ಕೆ ಯೋಗ್ಯವಾದ ವಿದ್ಯೆಗಳೆಂದು ಪ್ರಸಿದ್ಧವಾದುದು ಒಂದೇ ಕಾಲದಲ್ಲಿ. ಹೀಗೆ ಯಜ್ಞವಿರೋಧಿಗಳಾದ ವ್ರಾತ್ಯ ಜನರು ನಾಟ್ಯ ಸಂಗೀತವನ್ನು ಕೆಟ್ಟ ರೀತಿಯಲ್ಲಿ ಪ್ರಯೋಗಿಸುತ್ತಿದ್ದರಿಂದ ಸಮಾಜಕ್ಕೆ ಒಳ್ಳೆಯ ಸಂದೇಶ ಇರಲಿಲ್ಲ. ಆದ್ದರಿಂದ ವ್ರಾತ್ಯ ಜನರನ್ನು ಊರಿನಿಂದ ಹೊರಗಿಡಲಾಯಿತು. ಮನುಷ್ಯನ ಗುಣಕರ್ಮಗಳಿಂದ ವಿಭಾಗ ಮಾಡಿ ನಾಲ್ಕು ವರ್ಣಗಳು ಸೃಷ್ಟಿಯಾದವು ಎಂಬ ಭಗವದ್ಗೀತೆಯ ಸಂದೇಶದಂತೆ ಒಂದು ಕಾಲದಲ್ಲಿ ಆರ್ಯರಾಗಿದ್ದ ವ್ರಾತ್ಯರು ಅನಾರ್ಯರಾದರು.

ಅಥರ್ವ ವೇದದ ಕಾಲದಲ್ಲಿ ನರ್ತನವು ದುರ್ದೆಶೆಗಿಳಿದುದರಿಂದ ಬಹುಶಃ ಇಂದ್ರಾದಿ ದೇವತೆಗಳು ಕ್ರಮಬದ್ಧವಾದ ಮಾರ್ಗೀ ಶೈಲಿಯ ನಾಟ್ಯವು ಎಲ್ಲರಿಗೂ ಲಭ್ಯವಾಗಬೇಕು ಎಂಬ ದೃಷ್ಟಿಯಿಂದ ಬ್ರಹ್ಮನಲ್ಲಿ ಮೊರೆಹೋಗಿರಬೇಕು. ಇಲ್ಲಿಯೂ ಒಂದು ಮುಖ್ಯವಾದ ವಿಚಾರವೇನೆಂದರೆ ವೇದಗಳು ಶೂದ್ರ ಜಾತಿಗಳಿಗೆ ನಿಷಿದ್ಧವಾದುದರಿಂದ ಎಲ್ಲಾ ವರ್ಗದವರಿಗೂ ಲಭ್ಯವಾಗಬಹುದಾದ ಒಂದು ಐಯ್ದನೇಯ ವೇದವನ್ನು ರಚಿಸು ಎಂಬುದಾಗಿ ಉಲ್ಲೇಖಿಸಲಾಗಿದೆ. ಆದ್ಯರಂಗಾಚಾರ್ಯಾರ ನಾಟ್ಯಶಾಸ್ತ್ರ ಗ್ರಂಥದ ಅಧ್ಯಾಯ – 36 ರಲ್ಲಿ 'ನಾಟ್ಯ ಭೂಲೋಕಕ್ಕೆ ಬಂದದ್ದು' ಎಂಬುದರ ಬಗ್ಗೆ ಭರತಮುನಿಯು ಹೇಳುವಂತೆ 'ನನ್ನ ಮಕ್ಕಳು ಪ್ರಹಸನಗಳಿಂದ ಜನರನ್ನು ಮೂದಲಿಸತೊಡಗಿದರು. ಅಸಭ್ಯ ಶೈಲಿಯ (ನಾಟ್ಯ) ಕೃತಿಯೊಂದರಲ್ಲಿ ಋಷಿಗಳ ಅಪಹಾಸ್ಯ ಮಾಡಿ ಜನ ಸಮೂಹದೆದುರು ಆಡಿದರು. ಅದು ಕೇಳಲು ಅಸಹ್ಯವಾಗಿತ್ತು. ಅದರಲ್ಲಿ ದುರಾಚಾರ, ಗ್ರಾಮ್ಯ, ನಡತೆಗಳ

ಅಪ್ರಸ್ತುತವಾದ, ನಿಷ್ಠುರವಾದ ಚಿತ್ರಣವಿದ್ದಿತು'. ಹೀಗೆ ಇದನ್ನು ಕೇಳಿದ ಋಷಿಗಳು ಬ್ರಾಹ್ಮಣರ ಸಮಾಜದಲ್ಲಿ ಹುಟ್ಟಿ ಬೆಳೆದು ಬಂದ 'ನೀವು ಹೋಮ ಹವನಗಳನ್ನು ಮಾಡದೆ ನಿರ್ವ್ರತರಾಗಿ ಶೂದ್ರರ ಆಚಾರಕ್ಕೆ ಇಳಿಯುವಿರಿ' ಎಂದು ಶಪಿಸಿದರು. ಹೀಗೆ ಚಿಂತೆಗೀಡಾದ ಭರತಮುನಿಯು ತನ್ನ ಮಕ್ಕಳಿಗೆ 'ಚಿಂತೆಗೀಡಾಗ ಬೇಡಿ, ದೈವವು ನಮಗಾಗಿ ಹೀಗೆ ವಿಧಿಸಿತ್ತು, ಅದು ನಡೆದು ಹೋಯಿತು' ಎಂಬುದಾಗಿ ಹೇಳಿದುದನ್ನು ಉಲ್ಲೇಖಿಸಲಾಗಿದೆ. ಅಲ್ಲದೇ **"ಬೃಹದ್ದೇಶಿ"** ಯಲ್ಲಿ **'ಭರತ'** ಶಬ್ದಕ್ಕೆ **'ಶಬರ'** ನೆಂಬ ಅರ್ಥವಿರುವುದನ್ನು ತಿಳಿಸಲಾಗಿದೆ (ರಾ.ಸತ್ಯನಾರಾಯಣ). ಕನ್ನಡ ನಿಘಂಟುವಿನಲ್ಲಿ **'ಶಬರ'** ಎಂದರೆ **'ಬೇಡರು'** ಎಂಬುದಾಗಿ ಅರ್ಥೈಸಲಾಗಿದೆ.

ಈಗಿನ ದಲಿತರೇ ಈ ನೆಲದ ಆದಿಮವಾದ ಮೂಲ ನಿವಾಸಿಗಳು ಹಾಗೂ ನರ್ತನವೇ ಒಂದು ಇವರ ಭಾಗ ಎಂಬ ಸತ್ಯವನ್ನು ಪ್ರತಿಪಾದಿಸುವಂತಹ ಚರ್ಚೆಯನ್ನು ಮಾಡುತ್ತಾ ಹೋದಲ್ಲಿ ದಲಿತರಲ್ಲಿ ನೃತ್ಯದ ಹಿನ್ನಲೆಗೆ ಭಿನ್ನ ಭಿನ್ನ ಆಯಾಮಗಳು ಸೃಷ್ಟಿಯಾಗುತ್ತವೆ. ದಲಿತರಲ್ಲಿ ಸಂಗೀತ ನರ್ತನಗಳು ಯಾಕೆ ಹೆಚ್ಚಿವೆ ಎಂಬುದನ್ನು ಸಮರ್ಥಿಸಿಕೊಳ್ಳಲು ಕೂಡ ಜನಪದ ಕ್ಷೇತ್ರದಲ್ಲಿ ವೇದಗಳ ಕಾಲದಲ್ಲೇ ಆದಂತಹ ಸನ್ನಿವೇಶವು ಇಲ್ಲಿಯೂ ಸಿಗುತ್ತದೆ ಎಂದರೆ ತಪ್ಪಾಗಲಾರದು. ದ್ರಾವಿಡರಿಗೆ ನರ್ತನವೇ ಮುಖ್ಯ ಕ್ರೀಡೆಯಾಗಿತ್ತು. ಒಮ್ಮೆ ಒಂದು ಎತ್ತಿನ ಗಾಡಿಯಲ್ಲಿ ಹಾಡು ಕುಣಿತಗಳನ್ನು ತುಂಬಿಕೊಂಡು ಎಲ್ಲ ವರ್ಗದವರಿಗೂ ಹಂಚಬೇಕೆಂದು ದೇವರುಗಳು ಹೊರಡುತ್ತಾರೆ. ಎತ್ತಿನಗಾಡಿ ದಲಿತರ ಕೇರಿಗೆ ಬಂದ ತಕ್ಷಣ ಅಚ್ಚುಮುರಿದು ನೆಲಕ್ಕುರುಳುತ್ತದೆ. ಆಗ ದಲಿತರು ಹಾಡು ಕುಣಿತಗಳನ್ನು ತಮಗೆ ಬೇಕಾದಷ್ಟು ಬಾಚಿಕೊಂಡರು. ಅದಕ್ಕಾಗಿಯೇ ದಲಿತರಲ್ಲಿ ಕಲಾ ಶ್ರೀಮಂತಿಕೆ ಹೆಚ್ಚು ಎಂಬುದು ಗ್ರಾಮೀಣ ಪ್ರದೇಶದ ನಂಬಿಕೆ. ಹೀಗೆ ಸುಮಾರು 2ನೇ ಶತಮಾನದಿಂದ 18ನೇ ಶತಮಾನದವರೆಗೂ ಕೂಡ ದಲಿತ ಕಲಾವಿದರು ನೃತ್ಯದಲ್ಲಿ ಭಾಗಿಯಾಗಿರುವುದು, ಆಧಾರಸಹಿತವಾಗಿ ಗ್ರಂಥಗಳಲ್ಲಿ ಲಭ್ಯವಾಗಿದ್ದು ಆದಿಮ ಹಂತದಲ್ಲಿ ನೃತ್ಯಕಲೆಯ ಸೊತ್ತನ್ನು ಎಲ್ಲರಂತೇ ತಾವು ಪಡೆದುಕೊಂಡಿದ್ದರೂ ಈ ಒಂದು ವರ್ಣ ವ್ಯವಸ್ಥೆಯಲ್ಲಿ ದಲಿತ ಕಲಾವಿದರ ಸಂಖ್ಯೆ ಶಿಷ್ಟ ನೃತ್ಯ ಸಂಪ್ರದಾಯಕ್ಕೆ ಕಡಿಮೆಯಾಗಿರುತ್ತದೆ. ದಲಿತರಲ್ಲಿ ಪ್ರತಿಭೆ ಶ್ರೀಮಂತವಾಗಿರುವುದರಿಂದ ಹೊರಜಗತ್ತಿಗೆ ಅದರ ಬೆಳಕನ್ನು ವಿಸ್ತರಿಸುವ ಪ್ರಯತ್ನವನ್ನು ಮಾಡಬೇಕಾಗಿದೆ.

***(ಲೇಖಕರು ಬೆಂಗಳೂರಿನಲ್ಲಿ ನೃತ್ಯ ಶಿಕ್ಷಕಿ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ 'ಭರತನಾಟ್ಯಕ್ಕೆ ದಲಿತರ ಕೊಡುಗೆ' ಎಂಬ ವಿಷಯದಲ್ಲಿ ಪಿಎಚ್‌ಡಿ ಅಧ್ಯಯನ ನಿರತೆ.)*** ✽

## ನಮ್ಮೊಂದಿಗೆ ಬಳಗದಲ್ಲಿ...,

- **ಸ್ವಾತಿ ರಾಮಕೃಷ್ಣ ಭಟ್, ಕುರುಂಬಡೇಲು, ಬೆಳ್ಳಾರೆ, ಸುಳ್ಯ ದ.ಕ.**
- **ಕೆರೆಮನೆ ಶಿವರಾಮ ಹೆಗ್ಡೆ, ಯಕ್ಷಗಾನ ಕಲಾವಿದ-ಸಂಘಟಕ, ಗುಣವಂತೆ, ಹೊನ್ನಾವರ.**
- **ಕೆ. ಸೋಮನಾಥ್ ನಾಯಕ್, ಸಸ್ಯೋದ್ಯಾನ, ಗುರುವಾಯನಕೆರೆ, ದಕ್ಷಿಣ ಕನ್ನಡ.**

ನೂಪುರ ಭ್ರಮರಿ

... ನರ್ತನ ಜಗತ್ತಿಗೊಂದು ಕಿಟಕಿ

## ಚಂದಾ ವಿವರ

ಲಾಭಾಂಶದ ಬಗ್ಗೆ ಆಗ್ರಹವಿಲ್ಲದ ಪತ್ರಿಕೆಯ ಖರ್ಚು ವೆಚಗಳನ್ನು ಸರಿತೂಗಿಸುವುದು ಅಷ್ಟು ಸುಲಭದ ಮಾತಲ್ಲ ಎಂಬುದು ಆತ್ಮೀಯ ಓದುಗರಾದ ನಿಮಗೆ ತಿಳಿದೇ ಇದೆ. ಅಷ್ಟಕ್ಕೂ ಮೊದಲಿನಿಂದಲೂ ನೂಪುರ ಭ್ರಮರಿಗೆ ಚಂದಾ ವಿವರ ಕಡ್ಡಾಯವಲ್ಲ ಮತ್ತು ಓದುಗರ ಸಂಪರ್ಕಕ್ಕೆ ಅದೊಂದೇ ಮಾನದಂಡವೂ ಅಲ್ಲ. ಹಾಗಾಗಿ ಎಷ್ಟೋ ಬಾರಿ ಉಚಿತವಾಗಿಯೇ ಕಳಿಸಿಕೊಟ್ಟದ್ದಿದೆ. ಆದರೆ ಹೆಚ್ಚುತ್ತಿರುವ ಪ್ರಸರಣ ಸಂಖ್ಯೆ ಮತ್ತು ಖರ್ಚು–ವೆಚ್ಚಗಳನ್ನು ಗಮನಿಸಿದಾಗ ಮತ್ತು ಪ್ರಿಯ ಓದುಗರ ಅಪೇಕ್ಷೆಯಡಿಯಲ್ಲಿ ಚಂದಾವಿವರಗಳನ್ನು ಕೊಡುತ್ತಿದ್ದೇವೆ. ರಶೀದಿಯನ್ನು ಕಳಿಸಿಕೊಡಲಾಗುವುದು. ಈಗಾಗಲೇ ಸದಸ್ಯರಾದವರು ಇದನ್ನು ಪರಿಗಣಿಸಬೇಕಿಲ್ಲ. ಮೊತ್ತವನ್ನು ಕಳಿಸುವವರು ಮನಿಯಾರ್ಡರ್ ಅಥವಾ 'ಸಂಪಾದಕರು, ನೂಪುರ ಭ್ರಮರಿ' ಎಂಬ ಹೆಸರಿಗೆ ಡಿ.ಡಿ. ಕಳಿಸುವುದು ಉತ್ತಮ. ಚೆಕ್ ಕಳಿಸುವುದಿದ್ದಲ್ಲಿ ಬ್ಯಾಂಕ್‌ಕಮಿಷನ್ ಮೊತ್ತ 40/- ರೂ ಸೇರಿಸಿ ಕಳಿಸುವುದು. ಸಹಕರಿಸಿ.

| | | |
|---|---|---|
| ವಾರ್ಷಿಕ ಚಂದಾ : (ಅಂಚೆ ವೆಚ್ಚ ಸಹಿತ) | : | ರೂ. 100/- |
| ಪೋಷಕ | : | ರೂ. 1,000/- |
| ಮುದ್ರಣ ನಿಧಿ ( ಮಹಾಪೋಷಕ) | : | ರೂ. 3,500/- |

■ ■ ■ ■ ■ ■ ■ ■ ■ ■ ■ ■ ■

ವಿಮರ್ಶೆಯ ಕುರಿತಾಗಿ ಪ್ರತ್ಯೇಕ ಅಂಕಣವು ನೂಪುರ ಭ್ರಮರಿಯ ವೆಬ್‌ಸೈಟ್‌ನಲ್ಲಿ ಅನಾವರಣಗೊಂಡಿದ್ದು 2011ನೇ ಸಾಲಿನ ವಿಮರ್ಶೆಗಳನ್ನು (ಯಾವುದೇ ಪ್ರತ್ರಿಕೆ–ನಿಯತಕಾಲಿಕೆ–ವೆಬ್ ಪತ್ರಿಕೆ ಇತ್ಯಾದಿಗಳಲ್ಲಿ ಪ್ರಕಟಿತ ಅಥವಾ ಅಪ್ರಕಟಿತ ವಿಮರ್ಶೆ, ವರದಿ) ಲೇಖಕರು ಕಳಿಸಬಹುದಾಗಿದೆ. ಈ ಮೂಲಕ ವಿಮರ್ಶಾ ಕ್ಷೇತ್ರಕ್ಕೆ ಮತ್ತು ಅದರ ಪ್ರಶಸ್ತಿಗೆ ಹೆಚ್ಚಿನ ಉತ್ತೇಜನ ಮತ್ತು ಪಾರದರ್ಶಕತೆಯು ಒದಗಲಿದ್ದು ಮುಂದಿನ ಸಾಲಿನ ಪ್ರಶಸ್ತಿಯನ್ನು ಆಯ್ಕೆ ಮಾಡುವಲ್ಲಿ ಓದುಗರೂ ನಮ್ಮೊಂದಿಗೆ ಜೊತೆಯಾಗಲಿದ್ದಾರೆ. ಅದಕ್ಕೆ ಈಗಲಿಂದಲೇ ವೇದಿಕೆಯು ರೂಪುಗೊಳ್ಳುತ್ತಿದ್ದು; ಆಸಕ್ತರು www.noopurabhramari.com ನ್ನು ಸಂಪರ್ಕಿಸಬಹುದು.

ಅಂತೆಯೇ ಆಸಕ್ತರು ಉತ್ತಮ ನೃತ್ಯ /ನಾಟ್ಯ ಸಂಬಂಧೀ ಫೋಟೋಗಳಿದ್ದರೆ ಮುಖಪುಟ ವಿನ್ಯಾಸಕ್ಕಾಗಿ ಕಳಿಸಿಕೊಡಬಹುದು. ಕಲಾವಿದರ ಫೋಟೋಗಳಿದ್ದಲ್ಲಿ ಆದಷ್ಟೂ ಸೈಡ್ ಪೋಸ್ ಫೋಟೋ ಅಂದರೆ ಮುಖದ ಒಂದು ಬದಿ ಮಾತ್ರ ಕಾಣುವಂತಹ ಉತ್ತಮ ನೆರಳು ಬೆಳಕಿನ ಸಂಯೋಜನೆಯ ಛಾಯಾಚಿತ್ರಗಳನ್ನು ಕಳಿಸಿಕೊಡಿ.